# MANGALORE INSTITUTE OF TECHNOLOGY & ENGINEERING

(A Unit of Rajalaxmi Education Trust®, Mangalore)

Autonomous Institute affiliated to VTU, Belagavi, Approved by AICTE, New Delhi

Accredited by NAAC with A+ Grade & ISO 9001:2015 Certified Institution




## Course Name : ಸಾಂಸ್ಕೃತಿಕ ಕನ್ನಡ

## Semester : 1st / 2nd

## Course Code : 23HMCC109

# Module 5

| Module 5:ಸಾಂಸ್ಕೃತಿಕ ಜನಪದ ಕಥೆ ಮತ್ತು ಪ್ರವಾಸ ಕಥನ | No. of Hrs: 3 |
| --- | --- |
| ಯುಗಾದಿ: ವಸುಧೇಂದ್ರ<br><br>ಪೂರಕ ಓದು: ಮೆಗಾನೆ ಎಂಬ ಗಿರಿಜನ ಪರ್ವತ: ಹಿ.ಚಿ.ಬೋರಲಿಂಗಯ್ಯ | |

# ಯುಗಾದಿ: ವಸುಧೇಂದ್ರ

ದಿನಗಳೆದಂತೆ ಕರಗಿ ಹೋಗುವ ಕರ್ಪೂರದಂತೆ ಗೋಪಣ್ಣ ಮಾಸ್ತರರ ಧರ್ಪ, ಗತ್ತು, ಸಿಟ್ಟು ಕುಗ್ಗಿ ಹೋಗುತ್ತಿವೆಯೆಂಬುದು ಯಾರಿಗಾದರೂ ಗೊತ್ತಾಗುತ್ತದೆ. ಉಳಿದವರ ಮಾತಂತಿರಲಿ, ಸ್ವತಃ ಗೋಪಣ್ಣ ಮಾಸ್ತರರಿಗೂ ಮನದಟ್ಟಾಗಿಬಿಟ್ಟಿದೆ ಊರಿನಲ್ಲಿದ್ದಿದ್ದರೆ ಕೈಕೆಳಗೆ ಓದಿದ ಹುಡುಗರೋ, ಅವರ ತಂದೆ ತಾಯಿಗಳೋ–ಯಾರೋ ಒಬ್ಬರ "ನಮಸ್ಕಾರ ಗೋಪಣ್ಣಮಾಸ್ತರರಿಗೆ" ಸಿಕ್ಕೇ ಸಿಗುತ್ತಿತ್ತು. ಬೆಂಗಳೂರಿಗೆ ಬಂದಿದ್ದೇ ಅದೂ ಕಾಣೆಯಾಗಿಬಿಟ್ಟಿದೆ. ಹೆಂಡತಿಯಾದರೂ ಇದ್ದಿದ್ದರೆ ಅವಳ ಮೇಲಾದರೂ ಆಗೊಮ್ಮೆ ಈಗೊಮ್ಮೆ ಅಧಿಕಾರ ಚಲಾಯಿಸಬಹುದಿತ್ತೇನೋ! ಆದರೆ ರುಕ್ಮಿಣಮ್ಮ ಈಗ ಇಪ್ಪತ್ತು ವರ್ಷದ ಕೆಳಗೇ ಇಹಲೋಕದ ಯಾತ್ರೆ ಮುಗಿಸಿ ಹೋಗಿಬಿಟ್ಟಿದ್ದರು. ಆಗ ಹತ್ತಿರದವರು "ಇನ್ನೂ ಸಣ್ಣ ವಯಸ್ಸು ಗೋಪಣ್ಣ ಮತ್ತೊಂದು ಮದುವಿ ಮಾಡಿಕೋ..." ಅಂತ ಗಿಳಿಗೆ ಹೇಳಿದ ಹಾಗೆ ಹೇಳಿದರೂ ಕೇಳದೆ "ತನ್ನ ಮಗನಿಗೆ ಮೋಸ ಮಾಡಲ್ಲ..." ಅಂತ ಒಂದೇ ಪಟ್ಟು ಹಿಡಿದು ನುಡಿದಂತೆ ನಡೆದಿದ್ದರು. ಯಾರಾದರೂ ಗೋಪಣ್ಣನ ವಿಷಯ ಬಂದಾಗ "ಗಟ್ಟಿ ಮನಸ್ಸು ಅಂದರೆ ಅದು. ಗೋಪಣ್ಣ ಎಲ್ಲರ ಹಂಗಲ್ಲ...." ಅಂತಂದಾಗ ಒಳಗೊಳಗೇ ಹೆಮ್ಮೆಯಿಂದ ಬೀಗುತ್ತಿದ್ದರು. ಆದರೆ ಈಗೀಗ ಮದುವಿ ಆಗಿದ್ರೆ ಛಲೋ ಇತ್ತೇನೋ ಅಂತನ್ನಿಸಲು ಶುರುವಾಗಿಬಿಟ್ಟಿದೆ. ಸುಮ್ಮಸುಮ್ಮನೆ ಯಾವುದೋ ಹುಂಬ ಆದರ್ಶಕ್ಕೆ ಒಳಗಾಗಿಬಿಟ್ಟೆ, ಜೊತೆಗಾದರೂ ಯಾರಾದರೊಬ್ಬರಿರುತ್ತಿದ್ದರು. ರುಕ್ಮಿಣಮ್ಮ ಸಾಯುವ ವೇಳೆಗಾಗಲೇ ಮಗ ಪ್ರಹ್ಲಾದ ಪಿ.ಯು.ಸಿ ಸೇರಿಯಾಗಿತ್ತು. ಪಿ.ಯು.ಸಿ. ಮುಗಿಸಿ ಇಂಜಿನಿಯರಿಂಗ್ ಕಟ್ಟೆ ಹತ್ತಿದ ಮೇಲೆ ಗಂಡು ಮಕ್ಕಳಿಗೆ ತಂದೆ ತಾಯಿಯರ ಸಂಪರ್ಕ ಎಷ್ಟು ಮಹಾ ಬೇಕಾದೀತು? ಹಾಗಾಗಿ ಇತ್ತೀಚೆಗೆ ಯಾರಾದರೂ "ಗೋಪಣ್ಣಂದು ಗಟ್ಟಿ ಮನಸ್ಸು..." ಅಂತಂದರೆ ಅಣಕಿಸುತ್ತಿದ್ದಾರೇನೋ ಎಂಬ ಅನುಮಾನವಾಗುತ್ತದೆ.

ಹಾಗಂತ ಮಗನಿಂದ ದೂರವೇನೂ ಇಲ್ಲ. ನಿವೃತ್ತಿ ಆದ ತಕ್ಷಣ "ನಂಗಿಲ್ಲೇನು ಕೆಲಸ..." ಅಂತ ಎಲ್ಲರ ಮುಂದೆ ರಾಜಾರೋಷವಾಗಿ ಹೇಳಿ, ಊರಿನಲ್ಲಿ ಬೆವರು ಸುರಿಸಿ ಕಟ್ಟಿದ ಸ್ವಂತ ಮನೆಯನ್ನು ಬಾಡಿಗೆಗೆ ಕೊಟ್ಟು ಬೆಂಗಳೂರಿಗೆ ಬಂದು ಮಗನೊಂದಿಗೆ ಇದ್ದಾರೆ. ಎರಡು ಕೋಣೆಯ ಮಗನ ಮನೆ ಒಳ್ಳೆ ಇಂದ್ರಪ್ರಸ್ಥದಂತಿದೆ. ಯಾವುದಕ್ಕೇ ಆಗಲಿ, ಎಷ್ಟೇ ಖರ್ಚು ಮಾಡಿದರೂ ಮಗರಾಯ ಅದರ ಬಗ್ಗೆ ಚಕಾರವೆತ್ತುವುದಿಲ್ಲ. ಆದರೂ ಒಂದು ಬಗೆಯ ಪರಕೀಯ ಭಾವನೆ ಗಪ್ ಚುಪ್ ಆಗಿ ಅವರ ಮನಸ್ಸಿನೊಳಗೆ ಪ್ರವೇಶಿಸಿಬಿಟ್ಟಿದೆ.

ಹಾಗೆ ನೋಡಿದರೆ ಮೊದಲಿನಿಂದಲೂ ಮಗನೊಡನೆ ಅವರು ಮಾತನಾಡುವುದು ಕಡಿಮೆ. ಚಿಕ್ಕಂದಿನಲ್ಲಿ ಊರಲ್ಲಿದ್ದ ಒಂದೇ ಶಾಲೆಯಲ್ಲಿ ಮಗನನ್ನು ಸೇರಿಸಿಯಾದ ಮೇಲೆ ಗೋಪಣ್ಣ ಮಾಸ್ತರರು ಅವನೊಡನೆ ಎಂಥಹದೋ ಹುಸಿ ಗಾಂಭೀರ್ಯದಿಂದಿರುತ್ತಿದ್ದರು. ಶಾಲೆಯಲ್ಲಿ ಅವನ ವಿಷಯ ಬಂದಾಗ ತಮಗೆ ಸಂಬಂಧವೇ ಇಲ್ಲದವರಂತೆ ಇದ್ದುಬಿಡಲು ಪ್ರಯತ್ನಿಸಿ ಹೈರಾಣಾಗುತ್ತಿದ್ದರು. ಮನೆಯಲ್ಲಿ ಅವನಿಗೆ ಓದನ್ನು ಹೇಳಿಕೊಡಲು ಪ್ರಯತ್ನಿಸಿ, ಪರೀಕ್ಷೆಯಲ್ಲಿ ಬರಬಹುದಾದ ಪ್ರಶ್ನೆಗಳಿಗೇ ತಾನು ಹೆಚ್ಚು ಒತ್ತು ಕೊಡುತ್ತಿದ್ದೇನೇನೋ ಎಂಬ ಅನುಮಾನವಾಗಿ, ಬೇರೆ ಉಪಾಧ್ಯಾಯರ ಬಳಿ ಮನೆಪಾಠಕ್ಕೆ ಕಳುಹಿಸಿಬಿಡುತ್ತಿದ್ದರು. ಮಗನೂ ಅಷ್ಟೇ, "ಖಡಕ್ ಮಾಸ್ತರು" ಎಂದು ಶಾಲೆಯಲ್ಲಿ ಪ್ರಸಿದ್ಧಿ ಪಡೆದಿದ್ದ ಅಪ್ಪನೊಡನೆ ಒಂದು ಬಗೆಯ ಹೆದರಿಕೆ ಹೆದರಿಕೆಯಿಂದಲೇ ನಡೆದುಕೊಳ್ಳುತ್ತಿದ್ದ. ಅಪ್ಪನೊಡನೆ ರಸ್ತೆಯಲ್ಲಿ ನಡೆಯುವಾಗ ತನ್ನ ಗೆಳೆಯರು ಎದುರಾದರೆ ತನ್ನನ್ನು ನೋಡಿ" ಏನೋ ಪಲ್ಲಿ...." ಅಂತ ಮಾತನಾಡಿಸುವದಕ್ಕೆ ಬದಲು "ನಮಸ್ಕಾರ ಮಾಸ್ತರ್" ಎಂದು ಸಲಾಂ ಹೊಡೆದು ಆದಷ್ಟು ಬೇಗನೆ ಅಲ್ಲಿಂದ ಕಾಲುಕೀಳುತ್ತಿದ್ದಾಗ, ಅಪ್ಪನಿಂದ ಆದಷ್ಟು ದೂರವಿದ್ದುಬಿಡಬೇಕೆನ್ನುವ ಭಾವನೆ ಬರುತ್ತಿತ್ತು.

ಆದರೆ ಈಗಲೂ ಅಪ್ಪ–ಮಗನ ನಡುವೆ ಅಂತಹ ಮಾತುಕತೆಯಿಲ್ಲವಾದರೂ, ಮಗ ಅಪ್ಪನಿಗೆ ಹೆದರಿಕೊಳ್ಳುವುದಕ್ಕೆ ಬದಲಾಗಿ ಗೋಪಣ್ಣ ಮಾಸ್ತರರೇ ಮಗನ ಇರುವಿಕೆಯಲ್ಲಿ ಮುಜುಗರಗೊಳ್ಳುತ್ತಾರೆ. ಮಗ ಬಂದ ಅಂತ ಹೊರಗೆ ಕಾರಿನ ಸದ್ದು ಕೇಳಿದ ತಕ್ಷಣ ತಾವು ನೋಡುತ್ತಿದ್ದ ಕನ್ನಡ ಚಾನಲನ್ನು ಯಾವುದೋ ಇಂಗ್ಲೀಷ್ ಚಾನಲ್‌ಗೆ ಬದಲಾಯಿಸಿ, ಧ್ವನಿಯನ್ನಿಳಿಸಿ, ಸಪ್ಪಳವಾಗದಂತೆ ತಮ್ಮ ಕೋಣೆ ಸೇರಿಕೊಂಡುಬಿಡುತ್ತಾರೆ. ಮೊದಲಿನಂತೆ ಓಣಿಯಲ್ಲೆಲ್ಲಾ ಕೇಳಿಸುವಂತೆ ಸ್ಪಷ್ಟ ಹಾಗೂ ಧೀರ ಉಚ್ಚಾರಣೆಯಲ್ಲಿ ಹೇಳುತ್ತಿದ್ದ ಕುಮಾರವ್ಯಾಸ ಭಾರತವನ್ನು ಈಗ ಮೆತ್ತಗೆ ಏನೋ ಗೊಣಗುತ್ತಿರುವಂತೆ ತಮ್ಮ ರೂಮಿನ ಮೂಲೆಯಲ್ಲಿ ಕುಳಿತು ಹೇಳಿಕೊಳ್ಳುತ್ತಾರೆ. ಮಗನ ಗೆಳೆಯರು ಯಾರಾದರೂ ಮನೆಗೆ ಬಂದರಂತೂ ಸರಿಯೋ ಸರಿ. ತಮ್ಮ ಕೋಣೆ ಬಿಟ್ಟು ಕದಲುವುದಿಲ್ಲ. ಮೂತ್ರಕ್ಕೆ ಅವಸರವಾದರೂ ಸಾಧ್ಯವಾದಷ್ಟು ಹೊತ್ತು ಬಿಗಿ ಹಿಡಿದುಕೊಂಡಿರುತ್ತಾರೆ.

ತಮ್ಮ ಮತ್ತು ಮಗನ ನಡುವೆ ಈ ರೀತಿಯ ಹೊಸ ಪರಕೀಯ ಭಾವನೆ ಮೂಡಲು ಶುರುವಾಗಿದ್ದು ಯಾವಾಗಿನಿಂದ ಎಂದು ಯೋಚಿಸುತ್ತಾರೆ. ಸರಿಯಾಗಿ ಇಂತಹದೇ ಘಟನೆಯಿಂದು ನೆನಪಾಗುವುದಿಲ್ಲ. ಆದರೂ ಒಂದೆರಡು ನೆನಪುಗಳು ಬರುತ್ತವೆ. ಅವನು ಮೂರನೇ ವರ್ಷ ಇಂಜಿನಿಯರಿಂಗ್ ಮುಗಿಸಿ ರಜೆಗೆ ಮನೆಗೆ ಬಂದ ದಿನವಿರಬೇಕು. ಒಳಗೊಳಗೇ ಮಗ ಬಂದ ಅಂತ ಖುಷಿಯಾದರೂ ಅದನ್ನು ಹೊರಹಾಕದೆ "ಹೆಂಗೆ ಮಾಡಿದಿ ಪರೀಕ್ಷೆ? ಅಂತ ಕೇಳಿದ್ದರು. ಪ್ರಹ್ಲಾದ ಬರೀ ಗೋಣಲ್ಲಾಡಿಸಿ ಸುಮ್ಮನಾಗಿದ್ದ. ಪರವಾಗಿಲ್ಲ, ಮೀಸಿ ಭಲೋ ಕಾಣೋ ಹಾಗೆ ಬಂದವ ಅಂತ ಒಳಗೊಳಗೇ ಖುಷಿಯಾಗುತ್ತ ರಾಯರ ಮಠಕ್ಕೆ ಹೋಗಿ ಬಂದಿದ್ದರು. ಮನೆಗೆ ವಾಪಾಸಾದಾಗ ಮಗರಾಯ ದೋಸೆ ಮಾಡಿಕೊಂಡು ತಿನ್ನುತ್ತಾ ಕುಳಿತಿದ್ದ. ಯಾಕೋ ಅನುಮಾನವಾಯ್ತು "ಸಂಧ್ಯಾವಂದನೆ ಮಾಡಿದೆಯೇನೋ?" ಅಂತ ಧ್ವನಿಯೆತ್ತರಿಸಿ  ಕೇಳಿದ್ದರು. ದೋಸೆ ತಿನ್ನುವುದನ್ನು ನಿಲ್ಲಿಸಿ ಸುಮ್ಮನೆ ತಲೆ ಬಗ್ಗಿಸಿ ಕೂತ. ಸಿಟ್ಟು ನೆತ್ತಿಗೇರಿದರೂ ಸಹಿಸಿಕೊಂಡು "ಏಳು ಕೈಕಾಲು ತೊಳಕೊಂಡು ಸಂಧ್ಯಾವಂದನೆ ಮುಗಿಸಿ ತಿನ್ನಲಿಕ್ಕೆ ಕೂಡು..." ಎಂದು ಆಜ್ಞೆ ಮಾಡಿದರು. ಪ್ರಹ್ಲಾದ ತಗ್ಗಿಸಿದ ಧ್ವನಿಯಲ್ಲಿಯೇ "ನಂಗೆ ಅವೆಲ್ಲಾ ಮಾಡಲಿಕ್ಕೆ ಇಷ್ಟ ಇಲ್ಲಪ್ಪ" ಅಂತ ಸ್ಪಷ್ಟವಾಗಿ ಹೇಳಿದ್ದ. ಇನ್ನು ಗೋಪಣ್ಣಮಾಸ್ತರರಿಗೆ ತಡೆದುಕೊಳ್ಳಲಾಗಲಿಲ್ಲ "ಭಲೋ ಗುಣ ಕಲಿತಿ ಬಿಡಪ್ಪ. ಇದೇ ಏನು ನಿಮ್ಮ ಕಾಲೇಜಿನಾಗ ಕಲಿಸಿ ಕೊಡೋದು...." ಅಂತ ಒಂದೇ ಸಮನೆ ಒದರಾಡಿ, ಕಡೆಗೆ "ಸಂಧ್ಯಾವಂದನೆ ಮಾಡಿದ್ರೇನೆ ಈ ಮನ್ಯಾಗೆ ಸ್ಥಳ...." ಅಂತ ನಿಷ್ಠೂರವಾಗಿ ಹೇಳಿದ್ದರು. ಸಾಯಂಕಾಲ ಮಗರಾಯ ವಾಪಾಸು ಹೋಗಿದ್ದ. ಹಿತ್ತಲಿನ ಕಣಗಲಿ ಗಿಡದಲ್ಲಿ ಜನಿವಾರ ನೇತಾಡುತ್ತಿತ್ತು.

ಆ ರಾತ್ರಿ ನಿದ್ದೆಯಿಲ್ಲದೆ ಹೊರಳಾಡಿದ್ದರು. ಫೋಟೋದಲ್ಲಿನ ಹೆಂಡತಿ ರುಕ್ಮಿಣಿ ಉರಿಗಣ್ಣಿನಿಂದ ನೋಡಿದ್ದಳು. ಸತ್ತಾಗ ಹಂಪಿಯ ತುಂಗಭದ್ರಾ ನದಿಯ ದಡದ ಮೇಲೆ ನಡೆಸಿದ ಕರ್ಮ, ಏನೇ ಮಾಡಿದರೂ ಮುಟ್ಟದೇ ಹೋದ ಕಾಗಿ ಪಿಂಡ, ಕಡೆಗೆ ತಾವು ಹೋಗಿ "ನಿನ್ನ ಮಗ ತಪ್ಪು ಮಾಡಿದ್ರೂ ಹೊಟ್ಯಾಗೆ ಹಾಕ್ಕೊಳ್ತೇನೆ ಮಾರಾಯ್ತಿ" ಅಂತ ಎಲ್ಲರಿಗೂ ಕೇಳೋ ಹಂಗೆ ಬೇಡಿದ ಮೇಲೆ ಕಾಕರಾಯ ಪಿಂಡ ಮುಟ್ಟಿದ್ದು ನೆನಪಾಗಿ ಸಣ್ಣಗೆ ನಡುಗಿದರು. ಚಿಕ್ಕವನಿದ್ದಾಗ ಪ್ರಹ್ಲಾದ ಏನೋ ತುಂಟತನ ಮಾಡಿದ್ದು ಅವರ ಸಿಟ್ಟನ್ನು ಕೆರಳಿಸಿ, ಬೀಸಿ ಕೆನ್ನೆಗೆ ಹೊಡೆದಿದ್ದೇ ಎಚ್ಚರತಪ್ಪಿ ಬಿದ್ದಿದ್ದು. ಅನಂತರ ರುಕ್ಮಿಣಮ್ಮ "ಇನ್ನು ಮುಂದೆ ನನ್ನ ಮಗನ ಮೇಲೆ ಕೈ ಮಾಡಿದ್ರೆ ನನ್ನ ಆಣಿ ಅದೆ" ಅಂತ ರಣಚಂಡಿಯಂತೆ ಕೂಗಾಡಿ ಮಾತು ತಗೊಂಡಿದ್ದು ನೆನಪಾಗಿ ಕಳವಳ ಮತ್ತಷ್ಟು ಹೆಚ್ಚಾಗಿತ್ತು. ಮರುದಿನ ಎದ್ದವರೇ ಕಾಗದ ಬರೆದು, ಅವೆಲ್ಲಾ ಮನಸ್ಸಿಗೆ ಹಚ್ಚಿಗೋ ಬೇಡ. ಈ ಸಲದ ರಜಕ್ಕೆ ಬಾ ಅಂತ ಪತ್ರ ಬರೆದಿದ್ದರು. ಟಪಾಲಿಗೆ ಹಾಕುವ ಮುಂಚೆ ಟೀಪಾಯಿಯ ಮೇಲಿದ್ದ – ಹೆಂಡತಿಯ ಪೋಟೋದ ಮುಂದೆ ಹಿಡಿದು, "ಸಮಾಧಾನ ಅಯ್ತೇನೆ?" ಅಂತ ಕೇಳಿದ್ದರು. ರುಕ್ಮಿಣಮ್ಮ ಸಣ್ಣಗೆ ನಕ್ಕಿದ್ದರು. ಬೆಳೆದು ನಿಂತ – ಮಗನ ಮುಂದೆ ನಾನೂ ಹುಚ್ಚುಚ್ಚಾಗಿ ಆಡಬಾರದು ಅಂತ ಮೂರು ನಾಲ್ಕು ಸಲ ಅಂದುಕೊಂಡಿದ್ದರು. ಮಗನಿಂದ ಮತ್ತೆ ಮರುಟಪಾಲು ಬರುವವರೆಗೆ ವಿಚಿತ್ರ ಅಸಮಾಧಾನದಿಂದ ಒದ್ದಾಡಿದ್ದರು.

ಮಗನ ಇಂಜಿನಿಯರಿಂಗ್ ಕಡೆಯ ವರ್ಷ ಮುಗಿಯಲು ಬಂದಾಗಲಂತೂ ಅವನ ಮುಂದಿನ ಭವಿಷ್ಯದ ಗತಿಯೇನು ಎಂಬ ಇನ್ನಿಲ್ಲದ ಆತಂಕದಿಂದ ಓಡಾಡಿದರು. ಎಲ್ಲಾ ನ್ಯೂಸ್ ಪೇಪರ್ ನೋಡ್ತಾ ಇರು. ಎಂಪ್ಲಾಯ್‌ಮೆಂಟ್ ಎಕ್ಸ್‌ಚೇಂಜ್‌ನಲ್ಲಿ ಹೆಸರು ಬರಸು. ಜನರಲ್ ನಾಲೆಡ್ಜ್ ಕಡೀಗೂ ಗಮನ ಇರಲಿ ಅಂತ ಪ್ರತಿಯೊಂದು ಕಾಗದದಲ್ಲಿ ಬರೆದರು. ಮಗನಂತೂ ಅದರ ಬಗ್ಗೆ ಅಷ್ಟೊಂದು ತಲೆ ಕೆಡಿಸಿಕೊಂಡಂತೆ ಅವರಿಗೆ ಕಾಣಲಿಲ್ಲ. ಸಣ್ಣ ಮುಂಡೆಗಂಡ. ಅವನಿಗೇನು ಗೊತ್ತಾಗ್ತದೆ. ನಾನೇ ಒಳ್ಳೆ ಕೆಲಸ ಹುಡುಕಬೇಕು ಅಂತ ಅಲ್ಲಿ ಇಲ್ಲಿ ತಿರುಗಾಡಿದರು. ಅವರಿವರನ್ನು ಕಂಡು ಮಗನ ಜಾಣತವನ್ನು ಬಣ್ಣಿಸಿ "ನಾನು ಬರೀ ಒಬ್ಬ ಮಗನ ಅಪ್ಪನಾಗಿ ಹೊಗಳ್ತಾ ಇದೀನಿ ಅನ್ನೋಬೇಡ್ರಿ, ಒಬ್ಬ ಸಾಲಿ ಮಾಸ್ತರರಾಗಿ ಹೇಳ್ತೀನಿ. ನಮ್ಮ ಪ್ರಹ್ಲಾದ ಭಾಳ ಶ್ಯಾಣ್ಯಾ..." ಅಂತೆಲ್ಲಾ ಗಿಲೀಟಿನ ಮಾತನಾಡಿ ಸರಕಾರಿ ಸಂಸ್ಥೆಯೊಂದರಲ್ಲಿ ಕೆಲಸವನ್ನು ಖಾಯಂ ಮಾಡಿಸಿಕೊಂಡಿದ್ದರು. ಹೆಂಡತಿಯ ಫೋಟೋದ ಮುಂದೆ "ನೋಡಿದೇನೆ ರುಕ್ಕು, ಮಕ್ಕಳಿಗೆ ಅಪ್ಪ-ಅಮ್ಮ ಅಲ್ಲದೆ ಯಾರು ಮಾಡ್ತಾರೆ ಹೇಳು?" ಅಂತ ಈ ಛೇರಿನ ಮೇಲೆ ಕುಳಿತು ಕಾಫಿ ಕುಡಿಯುತ್ತಾ ಗತ್ತಿನ ಮಾತನಾಡಿದ್ದರು.

ಮಗ ಮನೆಗೆ ಬಂದವನೆ ತನಗೆ ಮಲ್ಟಿ ನ್ಯಾಷನಲ್ ಕಂಪನಿಯೊಂದರಲ್ಲಿ ಕೆಲಸ ಸಿಕ್ಕಿದೆಯೆಂದೂ, ಅದರಲ್ಲಿಯೇ ಸೇರುವುದಾಗಿಯೂ ತಿಳಿಸಿದ. ಗೋಪಣ್ಣ ಮಾಸ್ತರರಿಗೆ ಮಗನಿಗೆ ತಲೆ ಕೆಟ್ಟಿದೆಯೇನೋ ಎಂಬ ಅನುಮಾನವಾಯ್ತು "ರಿಟೈರ್ಡ್ ಆದ ಮೇಲೂ ಪಿಂಚಣಿ ಬರೋ ಸರಕಾರಿ ಕೆಲಸನ್ನ ಬ್ಯಾಡ ಅಂತೀಯಲ್ಲೋ. ಬುದ್ಧಿ ಎಲ್ಲಿಟ್ಟಿ?" ಅಂತ ದಬಾಯಿಸಿದರು. ಮಗ ಅಲ್ಲಾಡಲಿಲ್ಲ. "ನಂಗೆ ಸರಕಾರಿ ಕೆಲಸದಲ್ಲಿ ನಂಬಿಕೆ ಇಲ್ಲಪ್ಪ, ಅಲ್ಲಿ ಬುದ್ಧಿವಂತರಿಗೆ ಅವಕಾಶ ಕಡಿಮೆ. ಅಷ್ಟಕ್ಕೂ ಕಾಲೇಜಿನಾಗೆ ಸರಕಾರಿ ಕೆಲಸಕ್ಕೆ ಸೇರಿದ್ರೆ ಕೀಳಾಗಿ ನೋಡ್ತಾರೆ" ಅಂತ ಹೇಳಿದ. ಗೋಪಣ್ಣ ಮಾಸ್ತರರು ಮೈ ಕೈ ಪರಿಚಿಕೊಳ್ಳುವಂತಾಯಿತು. "ಹುಡುಗು ಮುಂಡೆಗಂಡ ನಿಂಗೇನು ಗೊತ್ತಾಗ್ತದೋ" ಅಂತ ಹರಿಹಾಯ್ದರು. ಅವರಿವರ ಮೂಲಕ ಹೇಳಿಸಿ ನೋಡಿದರು. ರಾಯರ ಮುಂದೆ ಕುಳಿತು "ಮಗನಿಗೆ ಒಳ್ಳೇ ಬುದ್ಧಿ ಕೊಡಪ್ಪ" ಅಂತ ಬೇಡಿಕೊಂಡರು. ಉಪಯೋಗವಾಗಲಿಲ್ಲ. ಕೊನೆಗೆ ಸೋತು "ವಿನಾಶ ಕಾಲೇ ವಿಪರೀತ ಬುದ್ಧಿ ನಿನ್ನ ಮನಸ್ಸಿಗೆ ಬಂದಂತೆ ಮಾಡು..." ಅಂತ ಹೇಳಿಬಿಟ್ಟರು. ಮಗನ ಬದುಕು ಹಾಳಾಯಿತೆಂದು ಅವರೆಣಿಸಿಬಿಟ್ಟಿದ್ದರು.

ಆದರೆ ಗೋಪಣ್ಣ ಮಾಸ್ತರರ ನಂಬಿಕೆಯ ಬೇರುಗಳು ಅಲ್ಲಾಡುವಂತೆ ಮಗರಾಯ ಬೆಳೆದ. ಎರಡನೆಯ ವರ್ಷಕ್ಕೆ ಇಪ್ಪತ್ತು ಸಾವಿರ ಪಗಾರ. ವಿಮಾನದಲ್ಲಿ ಹಾರಾಟ. ಗೋಪಣ್ಣ ಮಾಸ್ತರರು ಉಗುಳು ನುಂಗಿಕೊಂಡಿದ್ದರು. ಮಗನೇನಾದರೂ ಕಳ್ಳ ವ್ಯವಹಾರದಲ್ಲಿ ಪಾಲುದಾರನಾಗಿದ್ದಾನೆಯಾ ಎಂಬ ಅನುಮಾನವೂ ಆಗಿತ್ತು. ಮತ್ತಿಲ್ಲದಿದ್ದರೆ ಅಷ್ಟೊಂದು ಹಣ ಕೊಡಲು ಆ ಕಂಪನಿಗೆ ತಲೆ ಕೆಟ್ಟಿದೆಯೇ? ಅವರಿವರ ಬಳಿ ವಿಚಾರಿಸಿದರು. ಹಾಗೇನೂ ಇಲ್ಲ, ಅದು ಅಮೇರಿಕಾದ ಕಂಪನಿ, ಅಲ್ಲಿ ಸಂಬಳ ಹೆಚ್ಚು ಅಂತ ಅವರಂದ ಮೇಲೆ, ತಮ್ಮ ರಿಟೈರ್‌ಮೆಂಟ್ ಕಾಲದಲ್ಲಿ ಪಡೆದಿದ್ದ "ಅಬ್ಬಬ್ಬ ಹತ್ತುಸಾವಿರ!" ವೂ ದೃಷ್ಟಿ ಬೊಟ್ಟಿನಂತೆ ಕಾಣಲಾರಂಭಿಸಿ ಸಣ್ಣಗೆ ಅಳುಕಿದ್ದರು. ವರ್ಷ ವರ್ಷಕ್ಕೆ ಹೆಚ್ಚಾಗುತ್ತಲೇ ಹೋದ ಮಗನ ಸಂಬಳವನ್ನು "ಈಗೆಷ್ಟು?" ಎಂದು ಕೇಳುವ ಧೈರ್ಯವನ್ನು ಎಂದೋ ಕಳೆದುಕೊಂಡುಬಿಟ್ಟಿದ್ದರು. ಸಂಬಳದ ಮಾತಂತಿರಲಿ, ಅವನು ಕಟ್ಟುವ ತೆರಿಗೆ ಹಣದ ಮೊತ್ತವೇ ನಿದ್ರೆ ಕೆಡಿಸುತ್ತದೆ. ಮಗ ಮನೆಗೆ ಯಾರಾದರೂ ಬಂದಾಗ ಮಾತಿನ ಮಧ್ಯದಲ್ಲಿ "ಅಪ್ಪನ ಮಾತು ಕೇಳಿಕೊಂಡು ನಾನು ಸರಕಾರಿ ಕೆಲಸಕ್ಕೆ ಸೇರಿಕೊಂಡಿದ್ದರೆ ದೇವರೇ ಗತಿ..." ಅಂತಂದು ಜೋರಾಗಿ ನಕ್ಕುಬಿಡುತ್ತಾನೆ. ಆಗ ಗೋಪಣ್ಣ ಮಾಸ್ತರರು ಒಂದು ಪೆದ್ದು ನಗೆಯನ್ನು ಹೊರಚೆಲ್ಲುತ್ತಾರೆ.

ಒಮ್ಮೊಮ್ಮೆ ಮಗನ ಅಭ್ಯುದಯವನ್ನು ಕಂಡು ಅಸೂಯೆಪಡುತ್ತಿದ್ದೇನೆಯೆ ಎಂಬ ಅನುಮಾನವಾಗಿ "ಛೆ!ಛೆ!! ನಾನೆಂತಹ ಅಪ್ಪ" ಅಂತನ್ನಿಸಿ, ಆ ಎಲ್ಲಾ ಎಡವಟ್ಟು ಭಾವನೆಗಳನ್ನು ತಳ್ಳಿಹಾಕಿ, ಮಗನನ್ನು ತುಂಬಾ ಹೆಮ್ಮೆಯಿಂದ ನೋಡಲು ಪ್ರಾರಂಭಿಸುತ್ತಾರೆ. ಆರಡಿ ಎತ್ತರದ

ಮಗ, ಸೂಟು ಬೂಟು ಹಾಕಿಕೊಂಡು ಅಂಗೈ ಅಗಲದ ಮೊಬೈಲ್ ಫೋನಿನಲ್ಲಿ ಯಾರೋ ಅಮೇರಿಕಾದ ವ್ಯಕ್ತಿಯ ಜೊತೆ ಇಂಗ್ಲಿಷಿನಲ್ಲಿ ಅರಳು ಹುರಿದಂತೆ ಮಾತನಾಡುವುದನ್ನು ನೋಡಿ ಒಳಗೊಳಗೆ ಜಂಭದಿಂದ ಉಬ್ಬಿಹೋಗುತ್ತಾರೆ. ಚಿಕ್ಕಂದಿನಲ್ಲಿ ಅವನಿಗೆ ಮೂರು ವರ್ಷ ತುಂಬಿದ್ದರೂ ಮಾತು ಬಂದಿರಲಿಲ್ಲ. ಮಗ ಮೂಕನಾದನೇನೋ ಅಂತ ಮಾಸ್ತರರಿಗೂ ಅನುಮಾನ ಶುರುವಾಗಿತ್ತು. "ಇದೇನ್ರಿ ಗ್ರಹಚಾರ" ಅಂತ ರುಕ್ಮಿಣಮ್ಮನೂ ಒಳಗೊಳಗೇ ಮೂಕವೇದನೆ ಅನುಭವಿಸಿದ್ದಳು. ಎಲ್ಲೇ ನಿಂತು ಚಪ್ಪಾಳೆ ಹೊಡೆದರೂ ಅತ್ತ ಮುಖ ತಿರುಗಿಸುತ್ತಾನೆ – ಎಂಬುದೊಂದೇ ಸಮಾಧಾನದ ಸಂಗತಿ. ಡಾಕ್ಟರರು, ದೇವರು, ದಿಂಡರು ಎಲ್ಲಾ ಆಗಿತ್ತು.

ಆಗ ಗೆಳೆಯ ಕಾಸಿಂಸಾಬರಿಗೆ ದೇವರು ಅದ್ಯಾವ ಸೂಚನೆಯನ್ನು ಕೊಟ್ಟನೋ ದೇವರೇ ಬಲ್ಲ. "ಗೋಪಣ್ಣ, ಎಲ್ಲಾ ಮಾಡಿದ್ದೀ ನಮ್ಮ ದರ್ಗಾಕ್ಕೂ ಕರಕೊಂಡು ಹೋಗಿ ಬರೋದಕ್ಕೂ ಹೂಂ ಅನ್ನು. ಅಲ್ಲಿ ಏನೆಲ್ಲಾ ಪವಾಡ ನಡೀತವೆ. ಅಲ್ಲಾನ ಮನಸ್ಸಿನಾಗೆ ಇದ್ದರೆ ಮಾತು ಬಂದರೂ ಬರಬಹುದು" ಅಂತ ಹೇಳಿ, ಅವನನ್ನು ಹೆಗಲ ಮೇಲೆ ಎತ್ತುಕೊಂಡು ಹೋಗಿ ಬಂದಿದ್ದರು. ಅವನು ಮರುದಿನವೇ "ಅ...ಮ್ಮಾ..." ಎಂದಿದ್ದ. ರುಕ್ಮಿಣಮ್ಮನಂತೂ ಭಾವಾವೇಷದಿಂದ ಮಗನನ್ನು ಅಪ್ಪಿ ಮುದ್ದಾಡಿ "ದೇವರು ನನ್ನ ಕೂಸಿಗೆ ಮಾತುಕೊಟ್ಟುಬಿಟ್ಟನಲ್ಲೇ..." ಅಂತ ಆನಂದಭಾಷ್ಪ ಸುರಿಸಿದ್ದರು. ಗೋಪಣ್ಣ ಮಾಸ್ತರರು "ಅಪ್ಪ ಅನ್ನೋ..." ಎಂದು ಇನ್ನಿಲ್ಲದಂತೆ ಅವನನ್ನು ಗೋಳಾಡಿಸಿದ್ದರು. ಅಂದಿನಿಂದ ಪ್ರತಿವರ್ಷ ತಪ್ಪದೆ ಮೊಹರಂ ದಿನ ದರ್ಗಾಕ್ಕೆ ಹೋಗಿ ಬೆಲ್ಲ ಮಂತ್ರಿಸಿ, ಹೊಸ ಬಟ್ಟೆಗಳನ್ನು ಪೀರ್ಲು ದೇವರಿಗೆ ಕೊಡುವ ಸಂಪ್ರದಾಯವನ್ನು ಗೋಪಣ್ಣ ತಪ್ಪದೆ ಮಾಡಿದ್ದರು. ಹೇಗಿದ್ದಾರೋ ಕಾಸಿಂಸಾಬರು? ಸಂಜೆಯ ಹೊತ್ತು ನೆನೆಯುವಂತಹ ಮನುಷ್ಯ.

ಫಳಫಳನೆ ಹೊಳೆಯುವ ಹೊಚ್ಚ ಹೊಸ ಕಾರಿನ ಸ್ಟೀರಿಂಗನ್ನು ಒಂದೇ ಕೈಯಲ್ಲಿ ತಿರುಗಿಸುತ್ತಾ ಜನದಟ್ಟಣೆಯ ರಸ್ತೆಗಳಲ್ಲಿ ನಡೆಸುವಾಗ, ಅಪಾರ್ಟ್‌ಮೆಂಟ್‌ನೊಳಗೆ ಪ್ರವೇಶಿಸಿದ್ದೇ ಎದ್ದುನಿಂತು ಗೂರ್ಖಾ "ಸಲಾಂ ಸಾಬ್" ಅಂದಾಗ, ರಾತ್ರಿ ಹನ್ನೊಂದರ ತನಕ ಆಫೀಸಿನಲ್ಲಿ ಕೆಲಸ ಮಾಡಿ ಮನೆಗೆ ಬಂದು ಊಟ ಮಾಡಿ ಕೈ ತೊಳದಿದ್ದೇ ಕಂಪ್ಯೂಟರ್ ಮುಂದೆ ಕುಳಿತು ಪಟಪಟನೆ ಕೀಲಿ ಮಣೆಯನ್ನು ಒತ್ತುವುದನ್ನು ಕಂಡಾಗ ಮಗನ ಮೇಲೆ ಇನ್ನಿಲ್ಲದ ಅಭಿಮಾನ ಮೂಡುತ್ತದೆ. ಮೊನ್ನೆ ಮೊನ್ನೆಯಷ್ಟೇ ಎಂಟನೇ ತರಗತಿಯಿಂದ ಪ್ಯಾಂಟ್ ಹಾಕಿಕೊಂಡು ಹೋಗಬೇಕಾಗಿ ಬಂದಾಗ, ತಮ್ಮಲ್ಲಿ ಹೊಸ ಪ್ಯಾಂಟಿಗೆ ಹಣವಿಲ್ಲದೆ, ತಮ್ಮ ಹಳೆಯದನ್ನೇ ಆಲ್ಟರ್ ಮಾಡಿಸಿ ಕೊಟ್ಟಾಗ "ಗೆಳೆಯರು ನಗ್ತಾರಪ್ಪ" ಅಂತ ಶಾಲೆಗೆ ಹೋಗಲು ಹಠ ಮಾಡಿದವ ಇವನೇನಾ? ಮೊದಲವರ್ಷ ಹಾಸ್ಟೆಲ್‌ಗೆ ಸೇರುವಾಗ ರ್‍ಯಾಗಿಂಗ್ ಭಯದಿಂದ ಹೆದರಿ ಕಂಗಾಲಾದವನು, ಮರುವರ್ಷವೇ ಜೂನಿಯರ್ ಹುಡುಗರನ್ನು ಗೋಳಾಡಿಸಿದ್ದನ್ನು ತನ್ನ ಊರಿನ ಗೆಳೆಯರ ಮುಂದೆ ಜಂಭದಿಂದ ಹೇಳಿಕೊಳ್ಳುವುದನ್ನು ತಾವು ಕೇಳಿಸಿಕೊಂಡು ಬೈದಿದ್ದು ಇವನಿಗೇನಾ?

ಆದರೆ ಈ ರೀತಿಯ ಹೆಮ್ಮೆಯ, ಅಭಿಮಾನದ, ಭಾವೋದ್ವೇಗದ ಭಾವನೆ ಹೆಚ್ಚುಕಾಲ ನಿಲ್ಲದಂತೆ ಮತ್ತೆಂತಹದೋ ಸನ್ನಿವೇಶ ಗೋಪಣ್ಣ ಮಾಸ್ತರರನ್ನು ಗಲಿಬಿಲಿಗೆ ನೂಕಿಬಿಡುತ್ತದೆ. ಅದೊಂದು ದಿನ ಮಗ ಮನೆಗೆ ಬಂದವನೆ ಊಟ ಮಾಡಿ, ಕುರ್ಚಿಯಲ್ಲಿ ಕುಳಿತು ಪತ್ರಿಕೆ ಓದುತ್ತಿದ್ದವನು, ಏನೋ ನೆನಪಾದವನಂತೆ "ಅಪ್ಪ ಈವತ್ತು ಒಂದು ಮನೆ ಕೊಂಡುಕೊಂಡೆ. ಇಪ್ಪತ್ತು ಲಕ್ಷ ಆಯ್ತು. ಆ ಏರಿಯಾದಲ್ಲಿ ಅದು ಒಳ್ಳೆಯ ಬೆಲೆ" ಅಂತ ಕೂಲಾಗಿ ಹೇಳಿದ್ದ. ಗೋಪಣ್ಣ ಮಾಸ್ತರರು ಪಿಳಿಪಿಳಿ ಕಣ್ಣುಬಿಟ್ಟಿದ್ದರು. "ಮನೆ ಕೊಳ್ಳೋ ಯೋಚನಿ ಯಾವಾಗಿನಿಂದ ಶುರು ಮಾಡಿದ್ದಿ..." ಅಂತ ಕೇಳಿದರು. "ಹಾಗೇನೂ ಯೋಚನಿ ಮಾಡಿದ್ದಿಲ್ಲ. ಈವತ್ತು ಕೊಲೀಗ್ ಒಬ್ಬರ ಜೊತೆ ಹೋಗಿದ್ದೆ. ಅವರು ಕೊಂಡುಕೊಂಡರು. ನಂಗೂ ಭಲೋ ರೇಟ್ ಅನ್ನಿಸ್ತು ಕಂಪನಿ ನನ್ನ ಗ್ರೇಡಿಗೆ ಲೋನ್ ಕೊಡ್ತದೆ. ಅದಕ್ಕೆ ತೊಗೊಂಡೆ. ಈ ವೀಕೆಂಡ್‌ಗೆ ಅಲ್ಲಿಗೆ ಕರಕೊಂಡು ಹೋಗ್ತೀನಿ" ಅಂತ ಹೇಳಿಬಿಟ್ಟಿದ್ದ. ಗೋಪಣ್ಣ ಮತ್ತೆ ಹೆಚ್ಚಿಗೆ ವಿಚಾರಿಸಲು ಹೋಗಲಿಲ್ಲ. ತಾವು ಸಾಲ ಸೋಲ ಮಾಡಿ, ಸ್ವತಃ ಕಲ್ಲು ಮಣ್ಣು ಹೊತ್ತು ಕಟ್ಟಿಸಿದ ಊರಿನ ಮನೆ ಕಣ್ಣಿನ ಮುಂದೆ ಬಂದು ನಿಂತು ಸಂಕಟವಾಯಿತು. ಅದೂ ಇನ್ನೇನು ರಿಟೈರ್ ಆಗಲು ಮೂರು ನಾಲ್ಕು ವರ್ಷಗಳಿವೆ ಎನ್ನುವಾಗ, ಒಂದು ನಾಲ್ಕು ಲಕ್ಷ ಜೋಡಿಸುವುದರಲ್ಲಿ ಮೇಲೆ ಕೆಳಗೆ ಆಗಿ ಹೋಗಿತ್ತು. ಆದರೆ ಮಗರಾಯ ಕೆಲಸಕ್ಕೆ ಸೇರಿ ಐದೇ ವರ್ಷಗಳಲ್ಲಿ ಅಂತಹ ಯಾವುದೇ ಕಷ್ಟಗಳಿಲ್ಲದೆ ಅಂಗಡಿಗೆ ಹೋಗಿ ತರಕಾರಿ ತರುವಂತೆ ಮನೆ ಕೊಂಡು ತಂದನಲ್ಲ ಅಂತ ಅನ್ನಿಸಿ

ವಿಚಿತ್ರ ವೇದನೆಯನ್ನು ಅನುಭವಿಸಿದರು. ಮನೆಯಲ್ಲಿರುವ ವಾಷಿಂಗ್ ಮಷಿನ್, ಟಿ.ವಿ. ಫ್ರಿಜ್‌ಗಳಂತೆ ಮನೆಯೂ ಒಂದು ವಸ್ತುವಾಯಿತೆ? ಹೊಸ ಮನೆಯನ್ನು ನೋಡುವ ಆಸಕ್ತಿಯೂ ಅವರಿಗಿರಲಿಲ್ಲ. "ನಮ್ಮ ತರಹದ್ದು ಪಾಯಿಖಾನೆ ಇರೋ ಹಂಗೆ ನೋಡ್ಕೋಳಪ್ಪ ಇಲ್ಲಾಂದ್ರೆ ನಂಗೆ ಕಷ್ಟ ಆಗ್ತದೆ..." ಅಂತ ಕಳಕಳಿಯಿಂದ ಬೇಡಿಕೊಂಡಿದ್ದರು, ಅಷ್ಟೇ!

ಮಗ ಊರ ಹೊರಗೆ ಮನೆ ಕೊಂಡಿದ್ದ. ಆದಷ್ಟು ಊರ ಹೊರಗಿದ್ದರೆ ಒಳ್ಳೆಯದು. ಜನರ ಗಲಾಟೆ, ಪೊಲ್ಯುಷನ್ ಸಮಸ್ಯೆ ಇರೋದಿಲ್ಲ ಎನ್ನುವ ವಿವರಣೆಯನ್ನು ಕೊಟ್ಟಿದ್ದ. ಬರೀ ಅವನಂತಹವರೇ ವಾಸಿಸುವಂತಹ ಥಳಕು-ಬಳುಕಿನ ಅಪಾರ್ಟ್‌ಮೆಂಟದು. ಹತ್ತಿರದಲ್ಲಿ ಸಿಟಿಬಸ್‌ಗಳೂ ಸರಿಯಾಗಿ ಬರುತ್ತಿರಲಿಲ್ಲ. ಎಲ್ಲರ ಬಳಿಯೂ ಕಾರು, ಸ್ಕೂಟರ್ ಇರುವುದರಿಂದ ಅದೊಂದು ಸಮಸ್ಯೆಯೂ ಆಗಿರಲಿಲ್ಲ. ಅಪಾರ್ಟ್‌ಮೆಂಟಿನ ಬಳಿಯೇ ಹೊಸ ಹೆದ್ದಾರಿಯೊಂದು ಆಗುವ ಯೋಜನೆಗಳಿವೆಯಂತೆ. ಹಾಗಾದರೆ ಇಪ್ಪತ್ತು ಲಕ್ಷದ ಮನೆ ನಲವತ್ತು ಲಕ್ಷವಾಗುವುದರಲ್ಲಿ ಯಾವುದೇ ಅನುಮಾನವಿಲ್ಲ ಮಗ ಹೇಳಿದ. ನಾವೇ ಇರುವುದೆಂದು ನಿರ್ಧಾರ ಮಾಡಿದ ಮೇಲೆ ಮನೆಯ ಮಾರ್ಕೆಟ್ ಬೆಲೆ ಹೆಚ್ಚಾದರೇನು? ಕಡಿಮೆಯಾದರೇನು? ಎಂದು ಯೋಚನೆ ಬಂದು ಮಾಸ್ತರರಿಗೆ ವಿಚಿತ್ರವೆನ್ನಿಸಿತ್ತು. ಒಳ್ಳೆಯ ಬೆಲೆಗೆ ಸಿಕ್ಕಿತು ಎಂದು ಒಂದೇ ದಿನದಲ್ಲಿ ಮನೆ ಕೊಂಡವರು, ಒಳ್ಳೆಯ ಬೆಲೆ ಸಿಗುತ್ತದೆಂದರು ಅದನ್ನು ಒಂದೇ ದಿನದಲ್ಲಿ ಮಾರಲೂ ಸಿದ್ಧರಾಗುತ್ತಾರೇನೋ?

ಅಲ್ಲಿಗೆ ಬಂದ ಮೇಲೆ ಮನೆಯಲ್ಲಿ ಒಬ್ಬರೇ ಇರಲು ಬೇಸರವೆನ್ನಿಸಿ ಗೋಪಣ್ಣ ಮಾಸ್ತರರು ಮತ್ತೆ ಮಾಸ್ತರಿಕಿ ಉದ್ಯೋಗವೇನಾದರೂ ಮಾಡಿದರೆ ಒಳ್ಳೆಯದಲ್ಲವೆ ಎನ್ನಿಸಿ, ತಮ್ಮ ನಲವತ್ತು ವರ್ಷ ಸರ್ವೀಸಿನ ಪತ್ರ, ರಾಜ್ಯಪಾಲರಿಂದ ಪಡೆದ 'ಉತ್ತಮ ಶಿಕ್ಷಕ'ಪ್ರಶಸ್ತಿ ಪತ್ರಗಳನ್ನು ಹಿಡಿದು ಅಡ್ಡಾಡಿದರು. ಹತ್ತಿರದಲ್ಲಿದ್ದ ಶಾಲೆಗಳೆಲ್ಲಾ ಬರೀ ಕಾನ್ವೆಂಟ್‌ಗಳಾಗಿದ್ದವು. ನಿಮ್ಮ ಎಕ್ಸ್‌ಪೀರಿಯನ್ಸ್ ನಮಗೆ ಉಪಯೋಗಕ್ಕೆ ಬರೋದಿಲ್ಲ ಇಲ್ಲಿ ಬರೀ ನಾವು ಇಂಗ್ಲೀಷಿನಲ್ಲಿ ಕಲಿಸೋದು-ಅಂತ ಇಂಗ್ಲಿಷಿನಲ್ಲಿ ಹೇಳಿ ಹೊರದಬ್ಬಿದರು. ಕನ್ನಡ ಶಾಲೆಗಳೆಲ್ಲಿವೆ ಎಂದು ಮಾಸ್ತರರು ಕೇಳಿದ್ದಕ್ಕೆ, ನೀವು ಯಾವುದಾದರೂ ಸ್ಲಂ ಏರಿಯಾ ಹುಡುಕಿಕೊಂಡು ಹೋದರೆ ಅಲ್ಲಿ ಸಾಮಾನ್ಯವಾಗಿ ಕನ್ನಡ ಶಾಲೆಗಳಿರುತ್ತವೆ. ಇಂತಹ 'ಪಾಶ್ ಲೊಕಾಲಿಟಿ'ಯಲ್ಲಿ ಮಕ್ಕಳಿಗೆ ಕನ್ನಡದಲ್ಲಿ ಕಲಿಸಲು ಯಾವ ತಂದೆ ತಾಯಿಗಳು ಇಷ್ಟಪಡುವದಿಲ್ಲವಾದ್ದರಿಂದ ಇಲ್ಲೆಲ್ಲಾ ಬರೀ ಕಾನ್ವೆಂಟ್‌ಗಳೇ ಇರೋದು ಅಂತಂದರು. ದೂರದ ಸ್ಲಂಗಳಿಗೆ ನಡೆದುಕೊಂಡು ಹೋಗಿ ಪಾಠ ಮಾಡುವಷ್ಟು ಶಕ್ತಿ ಗೋಪಣ್ಣನವರಿಗಿಲ್ಲವಾದ್ದರಿಂದ ಕೆಲಸದ ಆಲೋಚನೆಯಿಂದ ಹೊರಬಂದರು.

ಕೆಲಸದ ಮನೆ ಹಾಳಾಯ್ತು ತಾನು ಸಂಪಾದಿಸಿ ಮಾಡುವುದದಾರೂ ಏನು? ಮಗನ ಸಂಪಾದನೆಯೇ ಹಬ್ಬದೂಟದಷ್ಟಿದೆ, ಮೇಲೆ ತುಪ್ಪ ಬಡಿಸಿದಂತೆ ತಮ್ಮ ಪಿಂಚಣಿ ಹಣ. ತಮ್ಮ ಮುಖ್ಯ ಸಮಸ್ಯೆ ಹೊತ್ತು ಕಳೆಯುವುದು. ಅದಕ್ಕೆ ಬೇರೆ ಏನಾದರೂ ಮಾಡಬಹುದಲ್ಲವೆ? ಎಂದು ಆಲೋಚಿಸಿ, ಅಪಾರ್ಟ್‌ಮೆಂಟಿನ ಚಿಕ್ಕ ಚಿಕ್ಕ ಮಕ್ಕಳನ್ನು ಸಾಯಂಕಾಲದ ಹೊತ್ತು ಕಲೆಹಾಕಿ ಚೈತ್ರ-ವೈಶಾಖ, ಪ್ರಭವ-ವಿಭವ, ಬಣ್ಣದ ತಗಡಿನ ತುತ್ತೂರಿ ಮುಂತಾದವುಗಳನ್ನು ಹೇಳಿ ಕೊಡಲು ಪ್ರಾರಂಭಿಸಿದರು. ರಸವತ್ತಾಗಿ ರಾಮಾಯಣ-ಮಹಾಭಾರತದ ಕತೆ ಹೇಳಲಾರಂಭಿಸಿದರು. ಮಕ್ಕಳೂ ಆಸಕ್ತಿ ತೋರಿಸಿದವು. ಆದರೆ ಮಕ್ಕಳ ತಂದೆ-ತಾಯಿಗಳು ಪ್ರಹ್ಲಾದನ ಮುಂದೆ ಕಂಪ್ಲೇಂಟ್ ಮಾಡಿದರು. "ಮಕ್ಕಳು ಶಾಲೆಯಲ್ಲಿಯೇ ಕಲಿತು ಸುಸ್ತಾಗಿರ್ತವೆ. ಹೆವಿ ಸಿಲಬಸ್ ಬೇರೆ. ಇಲ್ಲಿ ನಿಮ್ಮ ತಂದೆ ಅನಾವಶ್ಯಕವಾಗಿ ಯಾವುದೋ ಔಟ್‌ಡೇಟೆಡ್ ವಿಷಯಗಳನ್ನು ಕಲಿಸಿಕೊಡುವುದಕ್ಕೆ ಪ್ರಯತ್ನ ಪಡುತ್ತಾ ಇದ್ದಾರೆ. ಮಕ್ಕಳಿಗೆ ಜನವರಿ-ಫೆಬ್ರವರಿ ಗೊತ್ತಿದ್ರೆ ಸಾಕು, ಈ ಚೈತ್ರ-ವೈಶಾಖ ಎಲ್ಲಾ ಯಾವುದಕ್ಕೆ ಉಪಯೋಗ ಬರ್ತದೆ ಹೇಳಿ? ಸಾಯಂಕಾಲದ ಆ ಪ್ರೀಶಿಯಸ್ ಹೊತ್ತನ್ನ ಬೇರೆ ಏನಾದ್ರೂ ಪರ್ಸನಾಲಿಟಿ ಡೆವಲಪ್‌ಮೆಂಟ್‌ಗೆ ಉಪಯೋಗವಾಗುವಂತಹದಕ್ಕೆ ವ್ಯಯ ಮಾಡಿದ್ರೆ ಒಳ್ಳೇದಲ್ವಾ?" ಅಂತ ಸೂಕ್ಷ್ಮವಾಗಿ ಹೇಳಿದರು. ಪ್ರಹ್ಲಾದ "ಯಾಕಪ್ಪ ನಿಂಗೆ ಇಲ್ಲದ ಉಸಾಬರಿ. ನಲವತ್ತು ವರ್ಷ ದುಡಿದದ್ದು ಸಾಲದೇನು? ತಣ್ಣಗೆ ಮನ್ಯಾಗೆ ಕೂಡು" ಅಂತಂದ. "ನಿನಗೆ ಮೊದಲು ಹೇಳಿಕೊಟ್ಟಿದ್ದೂ ಇದೇ ಓದು ಅಲ್ಲೇನೋ?" ಎಂದು ಮಾಸ್ತರರು ಅಮಾಯಕ ಧ್ವನಿಯಲ್ಲಿ ಕೇಳಿದರು. ಅಪಾರ್ಟ್‌ಮೆಂಟಿನ ಜನರೆಲ್ಲರೂ ಅಂದಿನಿಂದ ಅವರನ್ನು "ಓಲ್ಡ್‌ಮ್ಯಾನ್" ಎಂದು ತಮ್ಮ ಮಾತುಕತೆಗಳಲ್ಲಿ ಕರೆಯಲಾರಂಭಿಸಿದರು.

ಹೋಗಲಿ, ಈ ಭೌತಿಕ ಪ್ರಪಂಚದ ಸಹವಾಸವೇ ಬೇಡ ಎಂದು ನಿರ್ಧರಿಸಿ ರಾಯರ ಮಠವನ್ನು ಹುಡುಕಿಕೊಂಡು ಹೋದರು. "ರಾಯರ ಮಠಕ್ಕೆ ಕರಕೊಂಡು ಹೋಗಪ್ಪ?" ಅಂತ ಹೇಳಿ ಆಟೋ ಹತ್ತಿದರೆ, "ಯಜಮಾನರೆ, ಈ ಊರಾಗೆ ಐವತ್ತಕ್ಕೂ ಹೆಚ್ಚು ರಾಯರ ಮಠ ಅವೆ. ನಿಮಗೆ ಯಾವ ರಾಯರ ಮಠ ಬೇಕು ಹೇಳಿ?" ಅಂತ ಉತ್ತರ ಸಿಕ್ಕಿತು. "ಹತ್ತಿರ ಇರೋ ಮಠ ಆದರೆ ಸಾಕು" ಅಂತ ಹೇಳಿದರು. ರಾಯರ ಮಠ ಭರ್ಜರಿಯಾಗಿತ್ತು. ರಾಶಿ ರಾಶಿ ಭಕ್ತಾದಿಗಳು, ಹುಂಡಿ ತುಂಬಿ ತುಳುಕುವಂತೆ ದಕ್ಷಿಣೆ. ಆಗಾಗ ಬರುವ ಸಿನಿಮಾ ಮತ್ತು ರಾಜಕೀಯ ಪ್ರಪಂಚದ ಜನ. ಎರಡು ರಸ್ತೆಗಳ ಆಚೆ ಇರುವ ಮತ್ತೊಂದು ಮಠದ ಭಕ್ತಾದಿಗಳು ತಮ್ಮ ಮಠಕ್ಕೆ ಬರುವಂತೆ ಆಕರ್ಷಿಸುವುದು. ಹೇಗೆಂದು ನಡೆಸುವ ಕಾರ್ಪೊರೇಟ್ ಶೈಲಿಯ ಸಭೆಗಳು, ಮುಖ್ಯ ಅರ್ಚಕರು ತಮ್ಮ ಅಪಾಯಿಂಟ್‌ಮೆಂಟ್‌ಗಳಿಗೆ ಬಳಸುವ ಕಂಪ್ಯೂಟರ್‌ಎಲ್ಲವೂ ಒಂದು ವಿಚಿತ್ರ ತಲ್ಲಣವನ್ನು ಅವರಲ್ಲಿ ಮೂಡಿಸಿದ್ದವು. ತಮ್ಮೂರಿನಲ್ಲಿ ಹರಿದ ಶ್ಯಾಟಿಗೆ (ಮೇಲು ಹೊದಿಕೆ) ತೇಪೆ ಹಚ್ಚಿಕೊಂಡು, ಬರೀ ಗಂಧ ಅಕ್ಷತೆ ತುಳಸಿಗಳಲ್ಲಿ ತೃಪ್ತಾರಾಗಿರುವ ಬಡರಾಯರಿಗೂ, ದಿನಕ್ಕೊಂದೊಂದು ಬಗೆಯ ದುಬಾರಿ ಶ್ಯಾಟಿಗಳನ್ನು ಹೊದೆದು, ಬೆಳ್ಳಿ ಬಂಗಾರದ ಆಭರಣಗಳಲ್ಲಿ ಝಗಝಗನೆ ಮಿರುಗುವ ಈ ರಾಯರಿಗೂ ಯಾವುದೇ ಹೊಂದಾಣಿಕೆ ಕಾಣದೆ, ಅಲ್ಲಿಗೆ ಹೋಗುವ ದಿನಚರಿಯನ್ನೂ ನಿಲ್ಲಿಸಿಬಿಟ್ಟರು.

ಕಡೆಗೆ ತಮ್ಮದೇ ಆದ ಒಂದು ದಿನಚರಿಯನ್ನು ಮಾಡಿಕೊಂಡರು. ಯಾವುದಾದರೂ ಖಾಲಿ ಸಿಟಿ ಬಸ್ಸಿನಲ್ಲಿ ಕಿಟಕಿಯ ಬಳಿ ಕುಳಿತು ಒಂದು ತುದಿಯಿಂದ ಮತ್ತೊಂದು ತುದಿಗೆ ಹೋಗಿ ವಾಪಾಸ್ಸಾಗುವುದು. ಬಿಲ್ಲೆ ಹಾಕಿದರೆ ಹಾಲನ್ನು ಕೊಡುವ ಮಷಿನ್ ಅನ್ನು ಗಂಟೆಗಟ್ಟಲೆ ನೋಡುತ್ತಾ ನಿಲ್ಲುವುದು. ಬೆಳಿಗ್ಗೆಯಿಂದ ಸಂಜೆಯವರೆಗೆ ಒಂದು ಕುರ್ಚಿಯಲ್ಲಿ ಕುಳಿತು ಅಪಾರ್ಟ್‌ಮೆಂಟ್ ಕಾಯುವ ಜವಾನನ ಹತ್ತಿರ ಅವನ ಕುಟುಂಬದ ಕಷ್ಟಸುಖದ ಬಗ್ಗೆ ಮಾತನಾಡುವುದು. ಹತ್ತಿರದಲ್ಲಿರುವ ಶಾಲೆಯ ಬಳಿ ಬೆಳಿಗ್ಗೆ ಮತ್ತು ಸಂಜೆ ನಿಂತು ಶಾಲೆಗೆ ಬರುವ ಮತ್ತು ಹೋಗುವ ಮಕ್ಕಳನ್ನು ನೋಡುವುದು. ಅವರು ಪ್ರಾರ್ಥನೆ ಮಾಡುತ್ತಿದ್ದರೆ. ಆ ಪ್ರಾರ್ಥನೆ ತಮಗೆ ಗೊತ್ತಿದ್ದರೆ ನಿಂತಲ್ಲೇ ಅವರೊಟ್ಟಿಗೆ ಗೊಣಗುಟ್ಟುವುದು. ಮಗನೇನಾದರೂ ಅಪರೂಪಕ್ಕೆ ಯಾವುದಾದರೂ ಬಿಲ್ ಕಟ್ಟಿ ಬಾ ಎಂದರೆ ಖುಷಿಯಿಂದ ಹೋಗಿ ಬರುವುದು. ಇವೊಂದೂ ಇಲ್ಲವೆಂದರೆ ತಮ್ಮ ಕೋಣೆಯಲ್ಲಿ ಕುಳಿತು ರುಕ್ಮಿಣಮ್ಮನ ಜೊತೆ ಮಾತನಾಡುವುದು!

ಮದುವೆಗೆ ಮುಂಚೆಯೇ ಮನೆ ಕಟ್ಟಿಸಿಕೊಂಡ ಮಗನಿಗೆ ಹೆಂಡತಿಯನ್ನು ತಾನಾಗಿಯೇ ಹುಡುಕಿಕೊಳ್ಳುವುದು ಕಷ್ಟವೇನೂ ಅಲ್ಲ. ಕೆಲಸ ಹುಡುಕಿ ಕೊಡುವ ಸಾಹಸ ಮಾಡಿ ಸೋತಿದ್ದ ನೆನಪು ಹಸಿಹಸಿಯಾಗಿರುವುದರಿಂದ ಈಗ ಮತ್ತೊಮ್ಮೆ ಅಂತಹ ತಪ್ಪನ್ನು ಮಾಡುವ ಧೈರ್ಯವಾಗಲಿಲ್ಲ. ಮಗ ಮನೆಯನ್ನು ಧಿಡೀರ್ ಎಂದುಕೊಂಡಂತೆಯೇ ಒಂದು ದಿನ ಮದುವೆಯನ್ನೂ ಮಾಡಿಕೊಂಡ. ಯಾರೋ ಆಫೀಸಿನ ಸಹೋದ್ಯೋಗಿಯಂತೆ, ತಂದೆ–ತಾಯಿ ಯಾರೂ ಇಲ್ಲದ ತಬ್ಬಲಿ. ಉಗುಳು ನುಂಗುತ್ತಲೇ "ನಮ್ಮ ಜನಾನಾ?" ಅಂತ ಕೇಳಿದ್ದರು. ಮಗ ಸಣ್ಣಗೆ ನಕ್ಕು "ಗೊತ್ತಿಲ್ಲ, ಕೇಳೋ ದುರ್ಬುದ್ಧಿ ತೋರಿಸಿಲ್ಲ...." ಅಂತ ಹೇಳಿದ್ದ. " ಸಂಧ್ಯಾವಂದನೆ ಮಾಡೋದಕ್ಕೆ ನಂಗೆ ಇಷ್ಟ ಇಲ್ಲಪ್ಪ,,,,,," ಅಂತ ಹೆದರಿಕೆಯಿಂದ ತಲೆ ತಗ್ಗಿಸಿ ಹೇಳಿದ್ದ. ಪ್ರಹ್ಲಾದ ಅಲ್ಲಿರಲೇ ಇಲ್ಲ. ನೇರ ನುಡಿ, ಹಸಿ ಗೋಡೆಗೆ ಹರಳು ಒಗೆದಂತೆ ಮಾತು.

"ವಿಶ್ವವೇ ನನ್ನ ಮನೆ, ಮಾನವ ಜನಾಂಗವೇ ನನ್ನ ಬಂಧುಗಳು", "ಜಾತಿ ವಿಜಾತಿ ಎನಬೇಡ, ದೇವನೊಲಿದವನೇ ಜಾತ" ಎಂದೆಲ್ಲಾ ನಲವತ್ತು ವರ್ಷ ಪಾಠ ಮಾಡಿದ್ದರೂ, ವಾಸ್ತವವನ್ನು ಸ್ವೀಕರಿಸುವುದು ಅಷ್ಟೇನೂ ಸುಲಭವಲ್ಲ. ಗೋಪಣ್ಣನವರು ಕಾಸಿಂಸಾಬರ ಜೊತೆಗೆ, ಊರಿನ ಇತರ ಜಾತಿಯವರ ಜೊತೆಗೆ ಪ್ರೀತಿಯಿಂದಲೇ ಬದುಕಿದ್ದರಾದರೂ, ಕಾಸಿಂಸಾಬರ ಮಗಳು ಚಾಂದಿನಿಯನ್ನೇ ತಮ್ಮ ಪ್ರಹ್ಲಾದನಿಗೆ ತಂದುಕೊಳ್ಳುವ ಆಲೋಚನೆ ಎಂದೂ ಮಾಡಿದವರಲ್ಲ.

ಸರಳವಾಗಿ ಯಾವುದೇ ಆಡಂಬರವಿಲ್ಲದಂತೆ ರಿಜಿಸ್ಟರ್ ಮದುವೆ ನಡೆಯಿತು. ತಮಗೂ ಹೇಳಿಕೊಳ್ಳುವಂತಹ ಬಂಧು ಬಳಗವಿಲ್ಲ, ಹುಡುಗಿಯ ಕಡೆಗಂತೂ ಸರಿಯೋ ಸರಿ. ಎಲ್ಲಾ ಗೆಳೆಯರಿಗೆ ಸ್ಟಾರ್ ಹೋಟಲಿನಲ್ಲಿ ಕೊಟ್ಟ ಪಾರ್ಟಿಗೆ ಗೋಪಣ್ಣನವರೂ ಹೋಗಿದ್ದರು. ಹಾಡಿ ಕುಣಿದು ಕುಪ್ಪಳಿಸಿ ಕೇಕೆ ಹಾಕುತ್ತಾ ಮುಗಿದು ಹೋದ ಆ ಪಾರ್ಟಿಯಲ್ಲಿ ಯಾರಿಗೂ ಇದು ಅಂತರ್ಜಾತಿಯ ವಿವಾಹ ಎಂಬ ವಿಶೇಷವೇ ಇರಲಿಲ್ಲವೇನೋ ಎಂಬ ಅನುಮಾನವಾಯ್ತು. ಸಮಸ್ಯೆಯಾಗಿದ್ದು ಊಟದಲ್ಲಿಯೇ! 'ಇದು ವೆಜಿಟೇರಿಯನ್ನಾ? ಇದು ವೆಜಿಟೇರಿಯನ್ನಾ ?" ಅಂತ ಕೇಳಿ ಕೇಳಿ, ಕಡೆಗೆ ಮೊಸರನ್ನವನ್ನೇ ಹೆಚ್ಚಾಗಿ ಹಾಕಿಸಿಕೊಂಡು ಮೂಲೆಯಲ್ಲಿ ಕುಳಿತು ಊಟ ಮಾಡಿ ಮನೆಗೆ ಬಂದಿದ್ದರು. ಹೋಗಲಿ ಬಿಡು, ಒಬ್ಬ ಅನಾಥ ಹುಡುಗಿಗೆ ಬದುಕು ಕೊಟ್ಟನಲ್ಲ ಅಂತ ಸಮಾಧಾನವಾಗಿತ್ತು. ಮಗನಿಗೆ "ಮನೆ ಕಟ್ಟಿ ನೋಡು, ಮದುವೆ ಮಾಡಿ ನೋಡು" ಎಂಬ ಮಾತಿನ ಅರ್ಥವೇ ಆಗಲಿಕ್ಕಿಲ್ಲವೇನೋ ಎಂದು ನಗು ಬಂದಿತ್ತು.

ಮನೆಗೆ ಬಂದ ರೇಖಾ ಒಳ್ಳೆಯವಳೆ. "ಮಾವ" ಅಂತ ಪ್ರೀತಿಯಿಂದ ಕರೆಯಲಾರಂಭಿಸಿದಳು. ಮಗನಿಗೆ ಸರಿಸಮಾನವಾದ ಕೆಲಸವಂತೆ. ಅಂದರೆ ಅಷ್ಟೇ ದೊಡ್ಡ ಪಗಾರವೂ ಬರುತ್ತಿರಬೇಕು. ಗಾಣದೆತ್ತಿನಂತೆ ಆಫೀಸಿನಲ್ಲಿ ದುಡಿಯುತ್ತಿದ್ದಳು. ಮಗನಂತೂ ಸರೇ ಸರಿ. ರಾತ್ರಿ ಹತ್ತು ಹನ್ನೆರಡಾದರೂ ಬರುತ್ತಿರಲಿಲ್ಲ. ಕೆಲವೊಮ್ಮೆ ಗೋಪಣ್ಣನಿಗೆ ದುಡಿದು ಸುಸ್ತಾಗಿ ಬರುವ ಮಗ-ಸೊಸೆಯರನ್ನು ಕಂಡಾಗ ಅಯ್ಯೋ ಅನ್ನಿಸುತ್ತಿತ್ತು. ಎಷ್ಟೋ ಬಾರಿ ರಾತ್ರಿ ಬಂದವರೆ ಊಟ ಕೂಡ ಮಾಡದೆ ಹಾಗೇ ಉಟ್ಟುಬಟ್ಟೆಯಲ್ಲಿ ಮಲಗಿಬಿಡುತ್ತಿದ್ದರು. ಶನಿವಾರ, ಆದಿತ್ಯವಾರ ರಜೆಯೆಂಬುದು ಬರೀ ನಾಮಕಾವಸ್ಥೆಗೆ ಮಾತ್ರ. ಆ ದಿನಗಳಲ್ಲೂ ಏನೋ ನೆಪ ಹೂಡಿಕೊಂಡು ಆಫೀಸಿಗೆ ಹೋಗುತ್ತಿದ್ದರು. ತಾವು ತಮ್ಮ ಮಾಸ್ತರಿಕೆಯ ವೃತ್ತಿಯಲ್ಲಿ ಎಂದಾದರೂ ಈತರಹ ಕೆಲಸ ಮಾಡಿದ್ದಿದೆಯೇ? ಎಂದು ಗೋಪಣ್ಣನವರು ನೆನಪಿಸಿಕೊಂಡು ಸೋಲುತ್ತಿದ್ದರು. ರುಕ್ಮಿಣಮ್ಮನ ಮುಂದೆ "ನೋಡಿದೇನೆ ಸೊಸೀನ? ಹೆಂಗಸರು ಲಕ್ಷಗಟ್ಟಲೆ ಸಂಪಾದಿಸೋದು ಕಂಡಿದ್ಯಾ?" ಅಂತ ವರದಿಯೊಪ್ಪಿಸಿದ್ದರು.

ಉಳಿದದ್ದೇನೇ ಇರಲಿ, ಸೊಸೆ ಯಾವ ಜಾತಿ ಎಂಬ ಯೋಚನೆ ಗೋಪಣ್ಣನವರಿಗೆ ಒಳಗೊಳಗೇ ಕೊರೆಯುತ್ತಿತ್ತು. ಅವಳ ಮಾತಿನ ನಯಗಾರಿಕೆ, ಸ್ನಾನ ಮಾಡದೆ ತಿಂಡಿ ತಿನ್ನದ ಸ್ವಭಾವ, ಅಡುಗೆ ಮನೆಯನ್ನು ಸ್ವಚ್ಛವಾಗಿಟ್ಟುಕೊಳ್ಳುವುದನ್ನು ಕಂಡಾಗ ನಮ್ಮವರೇ ಇರಬೇಕು ಅಂದುಕೊಂಡಿದ್ದರು. ಒಂದೆರಡು ವಾರದ ನಂತರ ರೇಖಾ ಗೋಪಣ್ಣವರ ಬಳಿ ಬಂದು "ನಾನು ಚಿಕನ್ ಬಿರಿಯಾನಿ ಮಾಡಿದ್ರೆ ನಿಮಗೆ ಬೇಜಾರಾಗಲ್ಲ ಅಲ್ಲಾ? ಯಾಕೋ ತಿನ್ನಬೇಕು ಅಂತ ತುಂಬಾ ಆಸೆ ಆಗ್ತಿದೆ" ಎಂದು ಕೇಳಿದಳು. ಪೂಜೆ ಮಾಡುವ ಸಾಲಿಗ್ರಾಮಗಳೆಲ್ಲಾ ಮುಖಕ್ಕೆ ರುಪ್ಪೆಂದು ಅಪ್ಪಳಿಸಿದಂತಾಗಿತ್ತು. ಆದರೆ ಗೋಪಣ್ಣನವರು ಈಗ ಎಂತಹ ಅನುಸಂಧಾನಕ್ಕೂ ಸಿದ್ಧವಾಗುವ ಸ್ಥಿತಿಗೆ ಬಂದಿದ್ದರು. "ಪಾತ್ರೆ ಬೇರೆ ಉಪಯೋಗಿಸಮ್ಮ" ಅಂತ ಹೇಳಿ ಸುಮ್ಮನಾದರು. ಮರುದಿನ ಪೂಜೆ ಮಾಡುವಾಗ ಕೃಷ್ಣನ ವಿಗ್ರಹಕ್ಕೆ ಕೈಮುಗಿದು, "ಮೂಲತಃ ಕ್ಷತ್ರಿಯನಾದ ನಿನಗೆ ದಿನಾ ಅನ್ನ-ಹುಳಿ ತಿನ್ನಿಸಿ ನಾಲಿಗೆ ಚಪಲ ತೀರಿಸಿಕೊಳ್ಳಲು ಏನೆಲ್ಲಾ ನಾಟಕವಾಡುತ್ತಿದ್ದೀಯೋ ನಮ್ಮಪ್ಪ" ಅಂತ ಭಕ್ತಿ ಪರವಶದಿಂದ ಮಾತನಾಡಿದ್ದರು.

ಮದುವೆಯಾದ ಮೇಲೆ ಮಗ ಹೊರದೇಶಗಳಿಗೆ ಹಾರಾಡುವುದು ಜಾಸ್ತಿಯಾಯ್ತು. ಬೆಳಿಗ್ಗೆ ಆಫೀಸಿಗೆ ಇಬ್ಬರೂ ಜೊತೆಯಾಗಿ ಹೋದರೆ, ಸಂಜೆ ರೇಖಾ ಒಬ್ಬಳೇ ಕಾರು ನಡೆಸಿಕೊಂಡು ಬರುತ್ತಿದ್ದಳು. "ಅರ್ಜೆಂಟ್ ಆಗಿ ನ್ಯೂಯಾರ್ಕ್‌ನಲ್ಲಿ ಏನೋ ಕೆಲಸ ಬಂತು ಮಾವ. ಹೋಗಿದ್ದಾರೆ ಇನ್ನೆರಡು ದಿನಕ್ಕೆ ವಾಪಸ್ ಬರ್ತಾರೆ" ಎಂದು ಹೇಳುತ್ತಿದ್ದಳು. ತಾವು ಬಳ್ಳಾರಿಗೂ ಹಾಗೆ ಹೋಗುತ್ತಿರಲಿಲ್ಲ ಎಂದು ಗೋಪಣ್ಣನಿಗನ್ನಿಸುತ್ತಿತ್ತು. ಕೆಲವೊಮ್ಮೆ ಮದುವೆಗೆ ಮುಂಚೆ ಇವನು ಇಷ್ಟೊಂದು ಹೊರದೇಶಗಳಿಗೆ ಹೋಗುತ್ತಿರಲಿಲ್ಲವಲ್ಲ ಎಂದನ್ನಿಸಿ, ಅದರ ಹಿಂದೆಯೇ ಇಲ್ಲಿಯ ತನಕ ತಾನವನ ವಿದೇಶೀ ಪ್ರಯಾಣಗಳಿಗೆ ಅಡ್ಡಿಯಾಗಿದ್ದೆನೆ? ಎಂಬ ಅನುಮಾನವಾಗುತ್ತಿತ್ತು. ನಾನು ಕೊನೆಯುಸಿರೆಳೆದರೆ ತನಗೆ ಎಳ್ಳು ನೀರು ಬಿಟ್ಟು ಸೀದಾ ಅಮೇರಿಕಾದ ವಿಮಾನ ಇವರು ಹತ್ತಿ ಬಿಡುತ್ತಾರೇನೋ? ಇಲ್ಲ ಇಲ್ಲ. ಈ ದೇಶದಲ್ಲಿಯೇ ಇರ್ತೀವಿ ಅಂತ ಇವರಿಬ್ಬರೂ ಬೇಡಿಕೊಳ್ಳುವ ತನಕ ತಾನು ಕಾಗೆಯಾಗಿ ಬಂದು ಪಿಂಡ ಮುಟ್ಟಬಾರದು ಅಂತ ನಿರ್ಧರಿಸಿಕೊಂಡರು. ಆದರೆ ಜನಿವಾರವನ್ನೇ ಬಿಸುಟು ಹಾಕಿದ ಇವನಿಂದ ಕಾಗಿಯೂ ಇಲ್ಲ. ಪಿಂಡವೂ ಇಲ್ಲ, ಮರಣ ಪತ್ರವನ್ನು ಮಾತ್ರ ಅತ್ಯಂತ ಕಾಳಜಿಯಿಂದ ಮಾಡಿಸಿಟ್ಟುಕೊಳ್ತಾನೆ, ಅದರಾಗೆ ಅನುಮಾನವಿಲ್ಲ ಅಂದುಕೊಂಡರು.

ಹೀಗೆ ದಿನಗಳು ಕಳೆಯುತ್ತಿರುವಾಗಲೆ ಒಮ್ಮೆ ಅಚಾನಕ್ಕಾಗಿ ಊರಿನಿಂದ ಕಾಸಿಂಸಾಬರು ಮನೆಗೆ ಬಂದರು. ತಮ್ಮ ಊರೇ ಮನೆಗೆ ಬಂದಷ್ಟು ಗೋಪಣ್ಣನವರಿಗೆ ಖುಷಿಯಾಯ್ತು. ಕಾಸಿಂಸಾಬರಿಗೆ ಮಾತನಾಡಲೂ ಬಿಡದಂತೆ ಊರಿನ ವಿಷಯಗಳನ್ನು ವಿವರ ವಿವರವಾಗಿ ಕೇಳಿ ತಿಳಿದುಕೊಂಡರು. ಶಾಲೆಯಲ್ಲಿ ತಮ್ಮ ಬದಲಿಗೆ ಸೇರಿದ ಯುವಮಾಸ್ತರು ಹೇಗೆ ಪಾಠ ಮಾಡುತ್ತಿದ್ದಾನೆ. ಹಳ್ಳದಾಗೆ ಇತ್ತೀಚೆಗೆ ನೀರು ಇರ್ತದಾ, ನರಸಿಂಹಸ್ವಾಮಿ ಜಾತ್ರಿ ವರ್ಷಾ ವರ್ಷ ನಡಿತದಾ ಎಂದೆಲ್ಲಾ ವಿಚಾರಿಸಿದರು. ಸೊಸೆಗೆ ಪರಿಚಯಿಸಿಕೊಟ್ಟರು. ದಿನ ತುಂಬಿವೆಯಾದ್ದರಿಂದ ರೇಖಾ ಮನೆಯಲ್ಲಿಯೇ ಇರುತ್ತಿದ್ದಳು. "ಹೆರಿಗೆ ದಿನ ಹತ್ತಿರ ಅದಾವೇನಮ್ಮ?" ಅಂತ ಕಾಸಿಂಸಾಬರು ಪ್ರೀತಿಯಿಂದ ರೇಖಾಳನ್ನು ಮಾತನಾಡಿಸಿದರು. ಸೊಸೆ ಅಡಿಗೆ ಮನೆಯೊಳಗೆ ಹೋದ ಮೇಲೆ ಗೋಪಣ್ಣ ಸಂಕೋಚದಿಂದಲೇ "ಕಾಸಿಮ್ಮಾ ಚಿಕನ್ ಬಿರಿಯಾನಿ ಬೇಕಂದ್ರೆ ಹೇಳೋ... ಸೊಸಿ ಸಂಕೋಚದಿಂದಲೇ ಭಾಳ ಛಲೋ ಮಾಡ್ತಾಳೆ..." ಅಂತ ಹೊಟ್ಟೆಯೊಳಗಿನ ವೇದನೆಯನ್ನು ಹೊರಹಾಕುವಂತೆ ಹೇಳಿದರು. ಕಾಸಿಂಸಾಬರಿಗೆ ಗಲಿಬಿಲಿಯಾದರೂ ಸಾವರಿಸಿಕೊಂಡು "ನಿನ್ನ ಮನಿಯಾಗೆ ಅವೆಲ್ಲಾ ಹೆಂಗೆ...ಹೆ. ಹೆ. ಹೆ. ಬೇಡ ಬೇಡ..." ಅಂತಂದು ಶಾಖಾಹಾರಿ ಆಹಾರವನ್ನೇ ತಿಂದರು.

ಊಟ ಮಾಡಿದ ಮೇಲೆ ಕಾಸಿಂಸಾಬರು ಮೆತ್ತನೆಯ ಸ್ವರದಲ್ಲಿ ತಾವು ಬಂದ ಕಾರ್ಯವನ್ನು ಗೋಪಣ್ಣನವರಿಗೆ ಹೇಳಿಕೊಂಡರು. "ಮಗ, ಸೊಸಿ ಇಬ್ಬರೂ ಭಾಳದೊಡ್ಡ ಕೆಲಸ ಮಾಡ್ತಾರೆ ಅಂತ ಕೇಳಿನಿ. ಪ್ರಹ್ಲಾದ ಅಡಿಗಿ ಮನಿ ಪಡಸಾಲಿ ಥರಾ ಫಾರಿನ್‌ಗೆ ಹೋಗ್ತಾನೆ ಅಂತ ಊರಾಗೆ ಮಾತಾಡಿದ್ದು ಕೇಳಿ ಭಾಳ ಸಂತೋಷ ಆಯ್ತು ಬಿಡು. ನೀನು ಇಂಥಾ ಮಗನ್ನ ಪಡೆಯೋದಕ್ಕೆ ಪುಣ್ಯ ಮಾಡಿದ್ದಿ" ಎಂದರು. "ಹೌದಪ್ಪ ಹೌದು, ಭಾಳ ಪುಣ್ಯ ಮಾಡೀನಿ" ಅಂತ ಗೋಪಣ್ಣ ನಿಟ್ಟುಸಿರುಬಿಟ್ಟರು.

"ಇಸ್ಮಾಯಿಲ್ ಈ ವರ್ಷ ಇಂಜಿನಿಯರಿಂಗ್ ಪೂರ್ತಿ ಮಾಡ್ತಾನೆ. ಕಂಪ್ಯೂಟರ್‌ನಾಗೇ ಓದಿಕೊಂಡ್ತಾನೆ. ಆದರೆ ನಿಮ್ಮ ಹುಡುಗರಂಗೆ ಹುಷಾರಲ್ಲ ಬಿಡು. ಕಡಿಮೆ ಮಾರ್ಕ್ಸ್ ಬಂದಾವಂತೆ. ಈಗ ಕೆಲಸ ಸಿಗುವಲ್ಲದು. ಓದಿಗಿಂತ ಮಾಡಿದ ಸಾಲ ಬೆಟ್ಟದಷ್ಟಾಗಿ ಕುಂತದೆ. ತೀರಿಸೋದು ಹೆಂಗಪ್ಪಾ ಅಂತ ನೆನಸಿಗೊಂಡರೆ ರಾತ್ರಿ ನಿದ್ದಿ ಸುತ ಬರಂಗಿಲ್ಲ. ವರ್ಕ್‌ಶಾಪೂ ಸರೀಗೆ ನಡೀವಲ್ಲದು. ದಿನ ದೂಡೋದೇ ಕಷ್ಟ ಆಗ್ಯಾದೆ. ಗೋಪಣ್ಣ ನೀನೇ ಹೆಂಗನ್ನಾ ಸಹಾಯ ಮಾಡಬೇಕೋ... ನಿನ್ನ ಮಗ-ಸೊಸಿ ಮನಸು ಮಾಡಿದರೆ ಎಲ್ಲಾ ಆಗ್ತದೆ" ಅಂತ ಕಳಕಳಿಯಿಂದ ಬೇಡಿಕೊಂಡರು. ಗೋಪಣ್ಣನಿಗೆ ಮನಸ್ಸು ಕರಗಿ ಹೋಯ್ತು "ನೀನೇನೂ ಚಿಂತಿ ಮಾಡಬೇಡ. ನಾನೆಲ್ಲಾ ಹೇಳ್ತಿನಿ" ಅಂತ ಆಶ್ವಾಸನೆಯನ್ನು ಕೊಟ್ಟರು. ಕಾಸಿಂಸಾಬರು ಊರಿಗೆ ಹೋಗುವಾಗ ರೇಖಾಗೆ ಮಗನ ಬಯೋಡೇಟಾ ಕೊಟ್ಟರು. "ಹೆಂಗೆ ಬರದಾನೋ ಗೊತ್ತಿಲ್ಲಮ್ಮ ನೀವು ಇನ್ನೂ ಚೆಂದಾಗಿ ಬರೀಬೇಕು ಅಂತಂದ್ರೆ, ಹಂಗೇ ಮಾಡಲಿಕ್ಕೆ ಹೇಳ್ತೀನಿ"ಅಂತಂದರು. ರೇಖಾ ಅದೆಲ್ಲಾ ಬೇಡವೆಂದಳು. ಮನೆಯವರು ಬಂದ ಮೇಲೆ ಅವರಿಗೆ ಎಲ್ಲವನ್ನೂ ಹೇಳುವುದಾಗಿ ತಿಳಿಸಿದಳು.

ಗೋಪಣ್ಣ ಮಾಸ್ತರರು ಬಸ್ ನಿಲ್ದಾಣದವರೆಗೆ ಕಾಸಿಂಸಾಬರನ್ನು ಬೀಳ್ಕೊಡಲು ಹೋದರು. ಕಾಸಿಂಸಾಬರ ಕೈಯಲ್ಲಿ ನೂರು ರೂಪಾಯಿಗಳನ್ನಿಟ್ಟು "ಇಲ್ಲಿಗೆ ಬಂದಾಗಿಂದ ದರ್ಗಾಕ್ಕೆ ಬೆಲ್ಲ ಮಂತ್ರಿಸೋದೇ ಇಲ್ಲದಂತೆ ಆಗ್ಯದೆ ನೋಡು. ನೀನೇ ನನ್ನ ಪರವಾಗಿ ಅಲ್ಲಿ ಸೇವಾ ಮಾಡಿಸು ಕಾಸಿಮ್ಮ" ಎಂದು ಹೇಳಿದರು. ಬಸ್ಸು ಹತ್ತುವದಕ್ಕೆ ಮುಂಚೆ ಕಾಸಿಂಸಾಬರು ಗೋಪಣ್ಣನ ಕೈ ಹಿಡಿದು "ಕೈ ಬಿಡಬೇಡ ಗೋಪಣ್ಣ ಭಾಳ ಕಷ್ಟ ಆಗ್ಯದೆ..." ಅಂತ ಕಣ್ಣು ತುಂಬಿ ಹೇಳಿದರು. ಗೋಪಣ್ಣನಿಗೆ ಪ್ರತಿಕ್ರಿಯಿಸಲೂ ಆಗದಂತೆ ಧ್ವನಿ ಗದ್ಗದಿತವಾಯಿತು. ತಮ್ಮ ಎಡಗೈಯಿಂದ ಅವರ ಬಲಗೈಯನ್ನು ಸಣ್ಣಗೆ ತಟ್ಟಿದರು.

ಪ್ರಹ್ಲಾದ ಬಲಗೈಯಿಂದ ಹಾಕಿಕೊಂಡ ಷೂನ ಲೇಸನ್ನು ಬಿಚ್ಚುತ್ತಾ ಎಡಗೈಯಿಂದ ಬಯೋಡೇಟಾವನ್ನು ಹಿಡಿದುಕೊಂಡು ಕಣ್ಣಾಡಿ-ಸಿದ ಪ್ರಹ್ಲಾದ ಸಾಧ್ಯವೇ ಇಲ್ಲವೆನ್ನುವಂತೆ ತಲೆಯಲ್ಲಾಡಿಸಿ ಬಿಟ್ಟ. "ಆಗಲ್ಲಪ್ಪ ನಮ್ಮ ಕಂಪಿನಿನಾಗೆ ಕನಿಷ್ಠ ಡಿಸ್ಟಿಂಕ್ಷನ್ ಆದರೂ ಇರಬೇಕು. - ತುಂಬಾ ಹೋಪ್‌ಲೆಸ್ ಮಾರ್ಕ್ಸ್ ಅವೆ. ಅವನು ಓದಿರೋ ಕಾಲೇಜೂ ಅಂತ ಹೆಸರುವಾಸಿಯೇನೂ ಅಲ್ಲ" ಅಂತಂದ. ಗೋಪಣ್ಣನಿಗೆ ಸುಮ್ಮನಿರಲಾಗಲಿಲ್ಲ. "ಹಂಗಂದ್ರೆ ಹೆಂಗೆ ಪ್ರಹ್ಲಾದ, ಕಾಸಿಂಸಾಬರು ನಮಗೆ ತುಂಬಾ ಬೇಕಾದವರು. ನಮ್ಮ ಕಷ್ಟಕಾಲಕ್ಕೆ ಸಹಾಯ ಮಾಡಿದವರು. ನೀನು ಈವತ್ತು ಹಿಂಗೆ ಪಠಪಠ ಅಂತ ಮಾತಾಡ್ತಿರೋದಕ್ಕೆ ಅವರೇ ಕಾರಣ. ಈಗ ಹೀಗಂದ್ರೆ ಹೆಂಗೆ ಹೇಳು..." ಅಂತ ಗೋಗರೆದರು. ಪ್ರಹ್ಲಾದನಿಗೆ ಇದು ಕಿರಿಕಿರಿಯೆನ್ನಿಸಿತು.

"ಅಪ್ಪ ಬಿ ಲಾಜಿಕಲ್, ಯಾವಾಗೋ ಚಿಕ್ಕಂದಿನಲ್ಲಿ ಮಾಡಿದ ಸಹಾಯಕ್ಕೂ, ಈಗ ಕೆಲಸ ಕೊಡಿಸೋದಕ್ಕೂ ಎಲ್ಲಿಂದೆಲ್ಲಿಯ ಸಂಬಂಧ. ಕಂಪನಿ ನನ್ನ ಸ್ವಂತದಲ್ಲಪ್ಪ ಯಾರೋ ಅಮೇರಿಕಾದವರದು. ಬರೀ ಯೋಗ್ಯತೆ ಇದ್ದವರನ್ನು ಮಾತ್ರ ತೊಗಳ್ತಾರೆ. ಅವನಿಗೆ ಒಳ್ಳೆ ಮಾರ್ಕ್ಸ್ ಇದ್ದಿದ್ರೆ ನಾನೇ ಮುಂದೆ ನಿಂತು ಕೆಲಸ ಕೊಡಿಸ್ತಿದ್ದೆ"

"ಕಂಪನಿ ಅಮೇರಿಕಾದ್ದು ಆದರೆ ಏನಾಯ್ತೋ? ನಮ್ಮ ದೇಶದಾಗೇ ಅದಲ್ಲೇನು. ನೀವೇ ಎಲ್ಲಾ ಅಲ್ಲಿ ಕೆಲಸ ಮಾಡೋದು, ನೀನು ಕಾಸಿಂಸಾಬರ ಕಷ್ಟ ಅವರಿಗೆ ಹೇಳು ಒಪ್ಪಿಕೊಳ್ತಾರೆ, ಸ್ವಲ್ಪ ಹೆಚ್ಚು ಕಮ್ಮಿ ಸಂಬಳ ಕೊಟ್ಟರೂ ನಡಿತದೆ. ಬರೀ ಬುದ್ಧಿವಂತರಿಗೇ ಕೆಲಸ ಅಂತಂದರೆ, ದಡ್ಡರು ಎಲ್ಲಿಗೆ ಹೋಗಬೇಕು ಹೇಳು? ಅವರೂ ಬದುಕು ಮಾಡಬೇಕೋ ಬೇಡವೋ? ಯೋಗ್ಯತೇನ ಬರೀ ಮಾರ್ಕ್ಸ್‌ನಿಂದ ಅಳೀಲಿಕ್ಕೆ ಆಗ್ತದೇನು?"

ಪ್ರಹ್ಲಾದನಿಗೆ ಸಿಟ್ಟು ಬಂತು.

"ಅಪ್ಪ ನಿಂಗೆ ಹೆಂಗೆ ಹೇಳಿದ್ರೂ ಅರ್ಥ ಆಗವಲ್ಲತ್ತಲ್ಲ. ಮಲ್ಟಿ ನ್ಯಾಷನಲ್ ಕಂಪನಿನಾಗೆ ಕೆಲಸ ಮಾಡೋದು ಅಂದರೆ ಏನಂತ ಅಂದುಕೊಂಡಿ ನೀನು? ಕನ್ನಡ ಸಾಲಿ ಮಾಸ್ತರ ಕೆಲಸ ಅಂತ ಮಾಡೀ ಏನು?..."

ಮುತ್ತು ಒಡೆದುಹೋಗಿಯಾಗಿತ್ತು. ಪ್ರಹ್ಲಾದನಿಗೆ ಆಡಿದ ಮಾತಿನ ಕ್ರೂರತೆ ಅರಿವಾಯ್ತು "ಐ ಆಂ ಸಾರಿ ಅಪ್ಪ..." ಅಂತಂದ. ಗೋಪಣ್ಣನಿಗೆ ಮತ್ತೆ ಮಾತನಾಡುವ ಯಾವ ಧೈರ್ಯವೂ ಉಳಿಯಲಿಲ್ಲ. ಸೀದ ತಮ್ಮ ಕೋಣೆಗೆ ಬಂದು ಹಾಸಿಗೆಯ ಮೇಲೆ ಮಲಗಿಬಿಟ್ಟರು. ಹಾಸಿಗೆಯ ಪಕ್ಕದಲ್ಲಿ ಟೇಬಲಿನ ಮೇಲೆ ನಗುನಗುತ್ತಿರುವ ಹೆಂಡತಿಯ ಚಿತ್ರ ಕಣ್ಣಿಗೆ ಬಿತ್ತು. "ನನ್ನ ಕರಕೊಂಡು ಹೋಗಿಬಿಡೆ. ಇನ್ನು ಇಲ್ಲಿರಲಾರೆ. ನಲವತ್ತು ವರ್ಷ ದೇವರ ಪೂಜೆ ಮಾಡಿದಂಗೆ ಮಾಡಿದ ಸೇವಾ ನಿನ್ನ ಮಗನ ಕಣ್ಣಾಗೆ ಕಾಲಕಸ ಆಯ್ತಲ್ಲೆ..." ಅಂತ ದು:ಖದಿಂದ ಮಾತನಾಡಿದರು. ಕಣ್ಣಿಂದ ಎರಡು ಹನಿ ಜಾರಿದವು.

ಮಗ ಒಳಗೆ ಬಂದು, ಹತ್ತಿರದಲ್ಲಿ ಕೂತ. ಗೋಪಣ್ಣ ಮಾಸ್ತರರ ತಲೆ ಸವರಿ "ಅಪ್ಪ, ಆವೇಶದಾಗೆ ಏನೋ ಮಾತಾಡಿಕೊಟ್ಟೆ, ತಪ್ಪಾಯ್ತು ನಿಜ ಹೇಳ್ತೀನಿ, ಬರೀ ಕೈ ತುಂಬ ಸಂಬಳ ಬರುತ್ತೆ ಅನ್ನೋದು ಬಿಟ್ರೆ ನನಗೆ ಇರೋ ಅಧಿಕಾರ ಅಷ್ಟರಲ್ಲಿಯೇ ಇದೆ. ಯಾರೋ ಅಮೇರಿಕಾದಲ್ಲಿ ಕುಳಿತು ಮಾಡಿದ ನಿಯಮಗಳನ್ನು ನಾವಿಲ್ಲಿ ಪಾಲಿಸಬೇಕಾಗ್ತದೆ. ಅದರ ಬಗ್ಗೆ ಚಕಾರ ಎತ್ತೋ ಹಂಗಿಲ್ಲ. ಅವರಿಗೆ ನಿಮ್ಮ ಕಾಸಿಂಸಾಬರ ಸಮಸ್ಯೆಗಳನ್ನ ಹೇಳಿದರೆ ಅರ್ಥ ಆಗಂಗಿಲ್ಲ. ನಾನು ಏನೇ ಹೇಳಿದ್ರೂ ಅವರ ಮಗಂಗೆ ಕೆಲಸ ಕೊಡಂಗಿಲ್ಲ. ಬೇಕಾದ್ರೆ ನಾನು ಕಾಸಿಂಸಾಬರಿಗೆ ಹಣದ ಸಹಾಯ ಮಾಡಬಲ್ಲೆ"ಅಂತಂದ. ಪ್ರಹ್ಲಾದನ ಮಾತಿಗೆ ಗೋಪಣ್ಣಮಾಸ್ತರರು "ಬೇಡಪ್ಪ, ಕಾಸಿಂಸಾಬನು ಸಹಾಯ ಕೇಳಿಕೊಂಡು ಬಂದಿದ್ದರೇ ಹೊರತು, ಸಾಲವನ್ನಲ್ಲ" ಅಂತ ಸೋತ ಧ್ವನಿಯಲ್ಲಿ ಹೇಳಿದರು.

ಆ ಘಟನೆಯ ನಂತರ ಗೋಪಣ್ಣ ಮಾಸ್ತರರು ಕಾದ ಗಾಜಿನಂತಾದರು. ಕೆಲವೇ ಹನಿ ತಣ್ಣೀರು ಬಿದ್ದರೂ ಪುಡಿಪುಡಿಯಾಗುವಂತಿದ್ದರು. ಅವರ ಮನಸ್ಥಿತಿ ಸುಧಾರಿಸಿದ್ದು ಮರುದಿನ ರಾತ್ರಿ ಹನ್ನೊಂದೂವರೆಗೆ ಸರಿಯಾಗಿ ರೇಖಾಳಿಗೆ ಹೆರಿಗೆಯ ನೋವು ಶುರುವಾದಾಗ! ಮಗನಿನ್ನೂ ಆಫೀಸಿನಿಂದ ಬಂದಿರಲಿಲ್ಲ. " ಮಾವ, ಅವರಿಗೆ ಫೋನ್ ಮಾಡಿರಿ" ಅಂತಂದಳು. ಮಾಸ್ತರರಿಗೆ ಮಗನ ಫೋನ್ ನಂಬರ್ ನೆನಪಿಗೆ ಬರಲಿಲ್ಲ. ಆ ನೋವಿನಲ್ಲಿಯೇ ರೇಖಾ "೯„ಲ„ಳ„„ಳ„„" ಅಂತ ಹೇಳಿದಳು. ಮಾಸ್ತರರು ನಡುಗುವ ಕೈಯಿಂದ ಫೋನ್ ಮಾಡಿದರು. ಮಗ ತಕ್ಷಣ ಹೊರಟು ಬರುವುದಾಗಿ ಹೇಳಿದ. ಆದರೆ ಅವನು ಬರುವುದಕ್ಕೆ ಏನಿಲ್ಲವೆಂದರೆ ಸುಮಾರು ಅರ್ಧ ಗಂಟೆ ಬೇಕಾಗುತ್ತದೆ. ಮನೆ ಊರಿನಿಂದ ಹೊರಗೆ. ಮಗ ಮನೆಗೆ ಬರುವವರೆಗೆ ಗೋಪಣ್ಣನವರಿಗೆ ಏನು ಮಾಡಬೇಕೆಂದು ತೋಚಲಿಲ್ಲ.

ಅಕ್ಕಪಕ್ಕದವರ ಸಹಾಯವನ್ನಾದರೂ ಕೇಳೋಣವೆಂದುಕೊಂಡರು. ಆದರೆ ಹಿಂದೆಯೇ ಈ ರಾತ್ರಿಯ ಹೊತ್ತು ಎಬ್ಬಿಸಿದರೆ ಸಿಟ್ಟಾಗುತ್ತಾರೇನೋ ಎಂದು ಸುಮ್ಮನಾದರು. ಸೊಸೆಯ ಬಳಿ ಕುಳಿತುಕೊಂಡು "ಈಗ ನೋವು ಹೆಂಗದಮ್ಮಾ? ಪರವಾಗಿಲ್ಲವಾ?" ಎಂದು ಪ್ರೀತಿಯಿಂದ ವಿಚಾರಿಸಿಕೊಂಡರು. ದೇವರ ಕೋಣೆಯೊಳಗೆ ಹೋಗಿ "ಸುಸೂತ್ರ ಹೆರಿಗೆ ಆಗೋ ಹಂಗೆ ನೋಡ್ಕೋಳಪ್ಪ" ಅಂತ ಪ್ರಾರ್ಥಿಸಿದರು.

ಮಗ ಬೇಗನೆಯೇ ಬಂದ. ರಾತ್ರಿಯಾದ್ದರಿಂದ ಟ್ರಾಫಿಕ್ ಹೆಚ್ಚಿರಲಿಲ್ಲ, ರೇಖಾ ಮಾಮೂಲಾಗಿ ತೋರಿಸಿಕೊಳ್ಳುತ್ತಿದ್ದ ಆಸ್ಪತ್ರೆಯ ಮುಂದೆ ಕಾರು ಬಂದು ನಿಂತಿತು. ಆದರೆ ಅನಿರೀಕ್ಷಿತವೊಂದು ಕಾದು ಕುಳಿತಿತ್ತು, ಆಸ್ಪತ್ರೆ ಬಂದ್! ಗೇಟಿನ ಮುಂದೆ ತೂಕಡಿಸುತ್ತ ಕುಳಿತಿದ್ದ ಪೇದೆಯೊಬ್ಬ "ದೊಡ್ಡ ಸ್ಕಾಂಡಲ್ ಆಗ್ಯೈತೆ ಸಾರ್... ಎಲ್ಲಾ ಬಂದ್... ಡಾಕ್ಟರಮ್ಮನ ಅರೆಸ್ಟ್ ಮಾಡ್ಯಾರೆ...." ಅಂತ ಹೇಳಿದ. ಪ್ರಹ್ಲಾದನಿಗೆ ಏನು ಮಾಡುವದೆಂದು ತೋಚಲಿಲ್ಲ. "ಹೌ ಕ್ಯಾನ್ ದೆ ಡು ದಟ್..." ಅಂತ ಜೋರಾಗಿ ಅಂದ. ಆದರೆ ಅಲ್ಲಿ ಯಾರ ಮುಂದೆ ಕೂಗಾಡುವದು? ಡಾಕ್ಟರರ ಮನೆಗೆ ಫೋನ್ ಮಾಡಿದ. ಎಂಗೇಜ್ ಟೋನ್ ಬಂತು. " ಫೋನ್ ತೆಗೆದು ಇಟ್ಟಾರೆ ಸಾರ್... ಅಲ್ಲಿಗೆ ಮಾಡಬೇಡಿ..." ಅಂತ – ಪೇದೆ ಹೇಳಿದ.

ಹತ್ತಿರದಲ್ಲಿ ಯಾವ ಆಸ್ಪತ್ರೆಯಿದೆ ಎಂಬುದೂ ಪ್ರಹ್ಲಾದನಿಗೆ ಗೊತ್ತಿಲ್ಲ, ಅಷ್ಟಕ್ಕೂ ಈ ಹೊತ್ತಿನಲ್ಲಿ ಹೋದರೆ ಹೊಸ ಕೇಸನ್ನು ಅಲ್ಲಿ ಸೇರಿಸಿಕೊಳ್ಳುತ್ತಾರೆಯೇ? "ಸುಮ್ಮನೆ ಸರಕಾರಿ ಆಸ್ಪತ್ರೆಗೆ ಕರಕೊಂಡು ಹೋಗ್ರಿ ಸಾರ್.... ಅದೇ ಬೇಸು...." ಅಂತ ಪೇದೆ ಸಲಹೆಯನ್ನು ಕೊಟ್ಟ, "ಸರಕಾರಿ ಆಸ್ಪತ್ರೆನಾ.... ನೊ....ನೊ...." ಅಂತ ಪ್ರಹ್ಲಾದ ಬೆಚ್ಚಿ ಬಿದ್ದ. ಗೋಪಣ್ಣ ಮಾಸ್ತರರೇ ತಲೆ ಹಾಕಿ "ಈಗ ಅದೇ ವಾಸಿ ಅನ್ನಿಸ್ತದೆ ಪ್ರಹ್ಲಾದ. ಹೆರಿಗೆ ಆದ ಮೇಲೆ ಬೇಕಂದ್ರೆ ಒಳ್ಳೆ ಆಸ್ಪತ್ರೆಗೆ ಶಿಫ್ಟ್ ಮಾಡೋಣ" ಅಂತ ಹೇಳಿದರು. ಮನಸ್ಸಿಲ್ಲದ ಮನಸ್ಸಿನಿಂದ ಪ್ರಹ್ಲಾದ ಒಪ್ಪಿಕೊಂಡ. ಆಗ ಬೇರೆ ದಾರಿಯೂ ಇರಲಿಲ್ಲ. ಪೇದೆಯಿಂದಲೇ ಯಾವ ದಿಕ್ಕಿಗೆ ಹೋಗಬೇಕು ಅದು ಎಲ್ಲಿದೆ ಎಂದೆಲ್ಲಾ ಕೇಳಿ ತಿಳಿದುಕೊಂಡ.

ಸರಕಾರಿ ಆಸ್ಪತ್ರೆಯಲ್ಲಿ ಕೇಳುವವರೇ ಗತಿಯಿರಲಿಲ್ಲ. ರಿಸೆಪ್ಷನ್ ಬಿಕೋ ಎನ್ನುತ್ತಿತ್ತು. ಪ್ರಹ್ಲಾದ ಅಲ್ಲಿಲ್ಲಿ ಓಡಾಡಿ ಅವರಿವರನ್ನು ಮಾತನಾಡಿಸಿದ. ಯಾರು ಸರಿಯಾದ ಉತ್ತರವನ್ನು ಕೊಡಲಿಲ್ಲ. ದೂರದಲ್ಲಿ ಹೋಗುತ್ತಿದ್ದ ದಾದಿಯನ್ನು ಕಂಡಿದ್ದೇ ಓಡಿ ಹೋದ. "ಸಂಬಂಧಪಟ್ಟವರು ಚಾ ಕುಡಿಲಿಕ್ಕೆ ಹೋಗ್ಯಾರೆ. ಒಂದು ಸ್ವಲ್ಪ ಹೊತ್ತು ಕಾಯಿರಿ" ಅಂತಂದಳು. "ನನ್ನ ಹೆಂಡತಿಗೆ ಆಗಲೇ ನೋವು ಶುರುವಾಗದ್ರೀ..." ಅಂತ ಪ್ರಹ್ಲಾದ ಸ್ವಲ್ಪ ಧ್ವನಿ ಎತ್ತರಿಸಿದ. "ರೀ ಮಿಸ್ಟರ್, ಎಲ್ಲಾರ ಹೆಂಗಸರೂ ನೋವು ಶುರುವಾದ ಮೇಲೆ ಆಸ್ಪತ್ರೆಗ ಬರೋದು.... ನಿಮ್ಮದೇನೋ ಸ್ಪೆಷಲ್ ಕೇಸ್ ಅನ್ನೋ ತರಹ ಆಡ್ತಿರಲ್ಲ... ಸ್ವಲ್ಪ ತಡಕೊಳ್ರಿ...' ಅಂತಂದಳು. ಪ್ರಹ್ಲಾದನಿಗೆ ಮೈ ಕೈ ಪರಚಿಕೊಳ್ಳುವಂತಾಯಿತು. ಲಕ್ಷಾಂತರ ರೂಪಾಯಿಗೆ ತೆರಿಗೆ ಕಟ್ಟುವ ತನ್ನಂಥವರು ಸರಕಾರದಿಂದ ಈ ತರಹದ ಸೌಕರ್ಯವನ್ನೇ ನಿರೀಕ್ಷಿಸುವುದು?

ಹಾಲಿನಲ್ಲಿ ಮುರಿದ ಬೆಂಚಿನ ಮೇಲೆ ಸೊಸೆಯನ್ನು ಮಲಗಿಸಿ, ತುದಿಯಲ್ಲಿ ಆತಂಕದಲ್ಲಿ ಗೋಪಣ್ಣ ಮಾಸ್ತರರೂ ಕುಳಿತಿದ್ದರು. ಒಳಗೆ ಹೋದ ಮಗ ಇನ್ನೂ ಹೊರ ಬಂದಿರಲಿಲ್ಲ. ಯಾರಾದರೂ ಸಹಾಯಕ್ಕೆ ಸಿಕ್ಕರೋ ಇಲ್ಲವೋ ಎಂದು ಚಡಪಡಿಸುತ್ತಿದ್ದರು. ಆಗ ಹೊರಗಿನಿಂದ ಬಂದ ಕುಳ್ಳನೆಯ ದಾದಿಯೊಬ್ಬಳು ಅವರ ಹತ್ತಿರ ಬಂದು ನಿಂತಳು "ಗೋಪಣ್ಣ ಮಾಸ್ತರರಲ್ಲೇನ್ರಿ?" ಅಂತಂದಳು. ಮಾಸ್ತರರು ಹೌದೆಂದು ತಲೆಯಲ್ಲಾಡಿಸಿದರು. ದಾದಿಯ ಮುಖ ಇಷ್ಟಗಲ ಅರಳಿತು. "ನಾನ್ರಿ ಮಾಸ್ತರ.... ರಾಧ.... ಅಕ್ಕಸಾಲಿಗರ ಗಂಗಣ್ಣನ ಮಗಳು.... ಗುರ್ತು ಸಿಗಲಿಲ್ಲೇನ್ರಿ? ನೀವು ನಂಗೆ 'ಗಿಡ್ಡ ಪುಟಾಣಿ ಮಕ್ಕಳ ರಾಣಿ' ಅಂತ ಕರೀತಾ ಇದ್ರಿ ನೋಡ್ರಿ...." ಅಂತಂದಳು. ಮಾಸ್ತರರು ಪ್ರತಿವರ್ಷವೂ ಚಿಕ್ಕ ಹುಡುಗಿಯೊಬ್ಬಳನ್ನು ಹಾಗೆ ಕರೆಯುತ್ತಿದ್ದರು. ಎಷ್ಟೇ ಜ್ಞಾಪಿಸಿಕೊಂಡರೂ ಈ 'ಗಿಡ್ಡ ಪುಟಾಣಿ' ನೆನಪಾಗಲಿಲ್ಲ. ಆದರೆ ಅದನ್ನು ತೋರ್ಪಡಿಸಿಕೊಳ್ಳದೆ "ಹೌದೇನಮ್ಮ.... ಛೇಷಿದ್ದೀಯೇನಮ್ಮ...." ಅಂತ ಮಾತನಾಡಿಸಿದರು.

ಮುಂದಿನ ಕೆಲಸವೆಲ್ಲಾ ಸರಾಗವಾಗಿ ಆಗಿ ಹೋಯಿತು. ರಾಧ ಅದೆಲ್ಲಿಂದಲೋ ಸ್ಟ್ರೆಚರ್ ತಂದಳು. ಒಂದಿಬ್ಬರು ಆಯಾಗಳನ್ನು ಜವಾನರನ್ನು ಕರೆತಂದಳು. "ಏನೂ ಹೆದರಬೇಡ್ರಿ ಮಾಸ್ತರೆ.... ಹೆರಿಗೆ ಸುಸೂತ್ರ ಆಗ್ತದೆ...." ಅಂತ ಮಾಸ್ತರರಿಗೆ ಸಮಾಧಾನ ಹೇಳಿದಳು. ಒಂದು ಹವಾನಿಯಂತ್ರಿತ ಕೊಠಡಿಯಲ್ಲಿ ಮಾಸ್ತರ್ ಮತ್ತು ಪ್ರಹ್ಲಾದನನ್ನು ಕೂಡಿಸಿದಳು. "ಆಯಾಸ ಆಗಿದ್ರೆ ಹಂಗೇ ಅಡ್ಡ ಆಗ್ರಿ ಮಾಸ್ತರ್.... ಹೆರಿಗೆ ಆದ ಮೇಲೆ ನಾನೇ ಎಬ್ಬಿಸ್ತೀನಿ....." ಎಂದು ಹೇಳಿದಳು. ಪ್ರಹ್ಲಾದ "ಯಾವ ಡಾಕ್ಟರ್ ಹ್ಯಾಂಡಲ್ ಮಾಡ್ತಾರೆ?" ಎಂ.ಡಿ.ನಾ ಇಲ್ಲಾ ಎಂ.ಬಿ.ಬಿ.ಸ್. ನಾ?" ಅಂತ ಕೇಳಿದ. ಅದಕ್ಕೆ ಉತ್ತರಿಸಿದ ರಾಧ "ಮಗ ದೊಡ್ಡ ಸಂಬಳ ಕೆಲಸ ಮಾಡ್ತಾನಂತೆ ಕಾಣಿಸ್ತದಲ್ಲರೀ ಮಾಸ್ತರ..." ಅಂತ ಗೋಪಣ್ಣನಿಗೆ ಹೇಳಿದಳು. "ಮತ್ತೆ ಸಿಜರಿನ್ ಏನಾದರೂ ಮಾಡಬೇಕಾಗ್ತದೇನಮ್ಮ?" ಎಂದು ಗೋಪಣ್ಣ ವಿಚಾರಿಸಿದರು. "ಆಯ್, ಗೊತ್ತಿರೋ ಕೇಸಿಗೆ ಡಾಕ್ಟರರು ಕತ್ತರಿ ಹಾಕಂಗಿಲ್ಲ ಬಿಡರಿ...." ಎಂದು ನಕ್ಕು ಉತ್ತರಿಸಿದಳು.

ಮತ್ತೆರಡು ತಾಸಿನಲ್ಲಿ ಹೆರಿಗೆಯೂ ಆಯ್ತು "ಮೊಮ್ಮಗ ಹುಟ್ಯಾನೆ... ನೋಡ ಬರ್ರಿ ಮಾಸ್ತರರ... ಬಳ್ಳಾರಿ ಬೆರಕಿ ಮುಖದಾಗೆ ಎದ್ದು ಹೊಡಿತದೆ..." ಅಂತ ಕರೆದುಕೊಂಡು ಹೋಗಿ ತೋರಿಸಿದಳು. ಬಿಳಿಯ ಬಟ್ಟೆಯಲ್ಲಿ ಕೈಕಾಲು ಮುದುರಿ ಕುಳಿತಿದ್ದ ಬೆಣ್ಣೆಯ ಮುದ್ದೆಯಂತಹ ಕೂಸು ಕನಸಿನಲ್ಲಿ ಏನೋ ಕಂಡಂತೆ ಸಣ್ಣಗೆ ನಕ್ಕಿತು. ಗೋಪಣ್ಣ ಮಾಸ್ತರರ ಹೃದಯ ಹಿಗ್ಗಿತು. ಎತ್ತಿಕೊಂಡು ನೋಡಿದರೆ ಥೇಟ್ ರುಕ್ಮಿಣಮ್ಮನ ಮುಖ! ಮಗರಾಯ ಎತ್ತಿಕೊಳ್ಳಲು ಆಸೆಪಟ್ಟ, "ಹುಷಾರು ಹೀಗೆ ಕುತ್ತಿಗೆ ಹತ್ತಿರ ಕೈ ಹಿಡಿದು ಎತ್ತಿಗೋಬೇಕು." ಅಂತ ತೋರಿಸಿಕೊಟ್ಟರು. ಮಗನನ್ನು ಎತ್ತಿಕೊಂಡ ಪ್ರಹ್ಲಾದನಿಗೆ ದೇಹದೊಳಗೆ ಸಂತೋಷದ ಸೆಲೆಯೊಂದು ಹರಡಿ ಮೈ ಜುಂ ಆಯಿತು. ಹೆಂಡತಿಯ ಹತ್ತಿರ ಹೋಗಿ ಕುಳಿತು ಅವಳ ಹಣೆಯನ್ನು ಸವರಿದ. ರೇಖಾ ನೆಮ್ಮದಿಯಿಂದ ಮುಗುಳುನಕ್ಕಳು.

ಹತ್ತು ದಿನ ಯಾವುದೇ ತೊಂದರೆಯಿಲ್ಲದಂತೆ ಸರಕಾರಿ ಆಸ್ಪತ್ರೆಯಲ್ಲಿ ಕಳೆಯಿತು. "ಮಾಸ್ತರರೆ... ಮಾಸ್ತರರೆ...." ಎನ್ನುತ್ತಾ ರಾಧ ಎಲ್ಲಾ ಸಹಾಯವನ್ನು ಮಾಡಿದಳು. "ನೀವು ಮನೀಗೆ ಹೋಗಿ ತಣ್ಣಗೆ ಮಲಗಿಕೊಳ್ರಿ, ಮಾಸ್ತರರೆ, ರಾತ್ರಿ ನಾವೆಲ್ಲಾ ಇಲ್ಲಿ ನೋಡ್ಕೋಳ್ತೀವಿ..." ಎಂದು ಕಳುಹಿಸಿಬಿಡುತ್ತಿದ್ದಳು. "ಮೊಮ್ಮಗಗೆ ಒಂದು ಛಲೋ ಹೆಸರು ಹುಡುಕಿಡ್ರಿ..." ಅಂತ ಹೇಳಿದಳು. ಬೇಡ ಬೇಡವೆಂದರೂ ಕೇಳದೆ ಅದೆಂತಹದೋ ಡಿಸ್ಕೌಂಟ್ ಕೊಡಿಸಿ ಕೊಟ್ಟಳು. ಪ್ರಹ್ಲಾದ ಬೆರಗಾಗುವಷ್ಟು ಕಡಿಮೆ ಬಿಲ್ ಆಗಿತ್ತು.

ಮನೆಗೆ ಹೋಗುವ ದಿನ ಮಾಸ್ತರರು ರಾಧಳಿಗೆ ಒಂದಿಷ್ಟು ಹಣ್ಣು-ಹಂಪಲುಗಳನ್ನು ಕೊಟ್ಟರು. ಅವುಗಳ ಮೇಲಿಟ್ಟಿದ್ದ ನೋಟುಗಳನ್ನು ನಯವಾಗಿ ನಿರಾಕರಿಸಿದ ರಾಧ "ಏನ್ರಿ ಮಾಸ್ತರರ... ನಿಮ್ಮ ಹತ್ತಿರ ಹಣ ಹೆಂಗೆ ತೊಗಳ್ಳಿಕಾಗ್ತದೆ ರೀ...."ಅಂತಂದಳು. "ಹಂಗಲ್ಲಮ್ಮ ಇಷ್ಟು ಹಚ್ಚಿಗೊಂಡು ಮಾಡಿದ್ದಿ... ಅದಕ್ಕೆ ಪ್ರತಿಯಾಗಿ ನಾವು ಏನಾರ ಕೊಡಬೇಕೋ ಬ್ಯಾಡೋ...." ಅಂತಂದರು. "ಮಾಸ್ತರರ, ಬದುಕು ಮಾಡೋದು ಹೆಂಗೆ ಅಂತ ಕಲಿಸಿ ಕೊಟ್ಟೀರಿ. ಅದಕ್ಕಿಂತ ದೊಡ್ಡದು ಬೇರೆ ಏನು ಕೊಡಲಿಕ್ಕೆ ಆಗ್ತೈತೆ ಬಿಡ್ರಿ" ಅಂತಂದು ಖಡಾ ಖಂಡಿತವಾಗಿ – ಹಣವನ್ನು ನಿರಾಕರಿಸಿಬಿಟ್ಟಳು. ಕಾರಿನ ತನಕ ಬಂದು, ಮಗುವಿನ ಮೂಗನ್ನು "ಅ...ಲ...ಲಾ...." ಎಂದು ಅಲ್ಲಾಡಿಸಿ ಬೀಳ್ಕೊಟ್ಟಳು.

ಕಾರಿನಲ್ಲಿ ವಾಪಾಸು ಮನೆಗೆ ಹೋಗುವಾಗ ಪ್ರಹ್ಲಾದ ಮಾತನಾಡಿದ. "ಅಪ್ಪ, ರಾಧಳಂತಹ ವ್ಯಕ್ತಿ ನನ್ನ ಜೀವನದಲ್ಲಿ ಖಂಡಿತಾ ಸಿಗಂಗಿಲ್ಲ ಅನಿಸ್ತದೆ. ಹಗಲು-ರಾತ್ರಿ ಖಬರಿಲ್ಲದಂಗೆ ದುಡಿದು ಯಾರೋ ಅಮೇರಿಕಾದವನು ಉಪಯೋಗಿಸುವಂತಹ ಸಾಫ್ಟ್‌ವೇರ್ ಬರಿತೀವಿ. ಅವರಿಗೆ ನಾವ್ಯಾರೋ ಗೊತ್ತಿಲ್ಲ. ನಮಗೆ ಅವರ್ಯಾರೋ ಗೊತ್ತಿಲ್ಲ. ಇಬ್ಬರಿಗೂ ಗೊತ್ತಿರೋದು ಆ ಕೆಲಸಕ್ಕಾಗಿ ನಿಗದಿಯಾಗಿರೋ ಬಡ್ಜೆಟ್ ಮಾತ್ರ..." – ಅಂತಂದ. ರೇಖಾಳ ತೊಡೆಯಲ್ಲಿ ಮಲಗಿ ನಿದ್ರೆ ಹೊಡೆಯುತ್ತಿದ್ದ ಸುಕುಮಾರನಿಗೆ ಅದೇನರ್ಥವಾಯಿತೋ ಗೊತ್ತಿಲ್ಲ, ಸಣ್ಣಗೆ ನಕ್ಕ!

## ಕಥೆಗಾರರ ಪರಿಚಯ

ಬಳ್ಳಾರಿಯ ಸಂಡೂರಿನಲ್ಲಿ ಜನಿಸಿದ ಕಥೆಗಾರ ವಸುಧೇಂದ್ರ ಅವರು ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಯಲ್ಲಿ ಇಂಜಿನಿಯರಿಂಗ್‌ನಲ್ಲಿ ಮಾಸ್ಟರ್ ಪದವಿಯನ್ನು ಪಡೆದರು. ೨೦ ವರ್ಷಗಳಿಂದ ಮಾಹಿತಿ ತಂತ್ರಜ್ಞಾನದ ಉದ್ಯೋಗಿಯಾಗಿ ದುಡಿಯುತ್ತಿರುವ ವಸುಧೇಂದ್ರ ಅವರು ಕನ್ನಡದ ಒಬ್ಬ ಪ್ರಖ್ಯಾತ ಕಥೆಗಾರರೂ ಹೌದು. ಮನೀಷೆ, ಉಗಾದಿ, ಚೇಳು, ಹಂಪಿ ಎಕ್ಸ್‌ಪ್ರೆಸ್, ಮೋಹನಸ್ವಾಮಿ, ವಿಷಮ ಭಿನ್ನರಾಶಿ ಮುಂತಾದವು ಇವರ ಕಥಾಸಂಕಲನಗಳು. ಹರಿಚಿತ್ತ ಸತ್ಯ ಇವರ ಕಾದಂಬರಿ. ಕೋತಿಗಳು, ವರ್ಣಮಯ, ಐದು ಪೈಸೆ ವರದಕ್ಷಿಣೆ ಮುಂತಾದವು ಇವರ ಪ್ರಬಂಧ ಸಂಕಲನಗಳು. ಮಿಥುನ, ಎವರೆಸ್ಟ್ ಇವರ ಭಾಷಾಂತರ ಕೃತಿಗಳು. ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ದ.ರಾ. ಬೇಂದ್ರೆ ಕಥಾ ಪ್ರಶಸ್ತಿ, ಮಾಸ್ತಿ ಕಥಾ ಪ್ರಶಸ್ತಿ ಮುಂತಾಗಿ ಅನೇಕ ಪ್ರಶಸ್ತಿಗಳನ್ನು ಪಡೆದಿರುವ ವಸುಧೇಂದ್ರ ಸಮಕಾಲೀನ ಕನ್ನಡ ಸಾಹಿತ್ಯದ ಮುಖ್ಯ ಲೇಖಕರೂ ಆಗಿ ಗುರ್ತಿಸಿಕೊಂಡಿದ್ದಾರೆ.

## ಕಥೆಯ ಆಶಯ

"**ಯುಗಾದಿ**" ಕಥೆಯು ಕನ್ನಡ ಶಾಲೆಯ ಮಾಸ್ತರಾಗಿರುವ ಗೋಪಣ್ಣ ಅವರಿಗೂ ಅವರ ಸಾಫ್ಟ್ ವೇರ್ ಇಂಜಿನಿಯರ್ ಮಗನಿಗೂ ಉಂಟಾಗುವ ಅಂತರ ಸಂಸ್ಕೃತಿಯ ಪರಿಣಾಮಗಳ ಬಗ್ಗೆ ತಿಳಿಸುತ್ತದೆ. ಭಾಷೆಯಲ್ಲಿ ಉಂಟಾದ ಕಂದರಗಳು ಮುಖ್ಯವಾಗಿ ಆರ್ಥಿಕ ಸಬಲತೆಯಿಂದಲೇ ಆದವು ಎನ್ನುವುದನ್ನು ಅವರು ಈ ಕಥೆಯ ಮುಖಾಂತರ ಸೂಚಿಸುವಂತಿದೆ. 'ರೂಢಿಯನ್ನು ಕಟ್ಟುವುದು ಕಷ್ಟ; ಮುರಿಯುವುದು ಇನ್ನೂ ಕಷ್ಟ; ಮರೆಯುವುದಂತೂ ಇನ್ನೂ ಕಷ್ಟ!'- ಇದು ವಸುಧೇಂದ್ರ ಅವರು ಬಳಸುವ ಪ್ರಮುಖ ಸಾಲು.

"**ಯುಗಾದಿ**" ಕತೆಯಲ್ಲಿ **ಬದಲಾದ ಸಾಮಾಜಿಕ ಮೌಲ್ಯಗಳಿಂದಾಗಿ ಒದ್ದಾಡುತ್ತಿರುವ ಹಿರಿಯ ಜೀವಿಯೊಬ್ಬನ ಅಸಹಾಯಕತೆಯ ಚಿತ್ರಣವಿದೆ. ಇಲ್ಲಿಯೂ ಸಹ ಆರ್ಥಿಕವಾಗಿ ಹಾಗೂ ಸಾಮಾಜಿಕವಾಗಿ ಕೆಳಸ್ತರದಲ್ಲಿರುವ ವ್ಯಕ್ತಿಗಳು ಉಳಿಸಿಕೊಂಡು ಬಂದಿರುವ ಸಾಂಪ್ರದಾಯಕ ಮೌಲ್ಯಗಳೇ ಕತೆಯ ತಿರುಳಾಗಿವೆ.**

ಹಳೆಯ ರೂಢಿಗಳಿಂದ ಬಿಡಿಸಿಕೊಂಡು ಹೊಸ ರೂಢಿಗಳ ನಿರ್ಮಾಣ ಹಂತದಲ್ಲಿರುವ ಸಮಾಜವನ್ನು ಕಾಣುವ ಅವರಲ್ಲಿ ಬದಲಾವಣೆಯ ಆಶಯಗಳು ಒತ್ತಾಸೆಯಾಗಿ ಬರುವುದಿಲ್ಲ. ಸಾಮಾಜಿಕ ಕ್ರೌರ್ಯಗಳನ್ನು ವರ್ಣಿಸಬಲ್ಲ ಚತುರತೆ ಇರುವ ಲೇಖಕನಿಗೆ, ಮೂರ್ತಸ್ವರೂಪದಲ್ಲಿರುವ ಮೌಢ್ಯ, ಆಚರಣೆಗಳ ಕ್ರೌರ್ಯ ಮುಂತಾದವುಗಳ ಅಮೂರ್ತನೆಲೆಗಳಿಗೆ ನುಗ್ಗಿ, ವಿಶ್ಲೇಷಿಸುವ ಗುಣವನ್ನು ಕಾಣಬಹುದಾಗಿದೆ. ಆಚರಣೆಗಳಲ್ಲಿ ನಂಬಿಕೆ ಕಳೆದುಕೊಳ್ಳುತ್ತಿರುವ ವರ್ಗಸೃಷ್ಟಿಯಾಗುತ್ತಿದೆ. ಇವು ಸಾಮಾಜಿಕ ಬದಲಾವಣೆಗಳೆಂದು ಗುರುತಿಸಬಹುದಾದರೂ, ಜಾತೀಯತೆ ಬೇರೆ ಬೇರೆ ಸ್ವರೂಪದಲ್ಲಿ ಆಚರಣೆಗೆ ಬರುತ್ತಿರುವುದನ್ನು ಲೇಖಕ ಗಮನಿಸಿದಂತೆ ಕಾಣಬಹುದಾಗಿದೆ.

# ಮಾದರಿ ಪ್ರಶ್ನೆಗಳು

1. `ರೂಢಿಯನ್ನು ಕಟ್ಟುವುದು ಕಷ್ಟ; ಮುರಿಯುವುದೂ ಇನ್ನೂ ಕಷ್ಟ; ಮರೆಯುವುದಂತೂ ಇನ್ನೂ ಕಷ್ಟ!'- ಇದು ವಸುಧೇಂದ್ರ ಅವರು ಬಳಸುವ ಸಾಲು, ಈ ಮಾತನ್ನು ಚರ್ಚಿಸಿರಿ.
2. "ಯುಗಾದಿ" ಕತೆಯಲ್ಲಿ ಬದಲಾದ ಸಾಮಾಜಿಕ ಮೌಲ್ಯಗಳಿಂದಾಗಿ ಒದ್ದಾಡುತ್ತಿರುವ ಹಿರಿಯ ಜೀವಿಯೊಬ್ಬನ ಅಸಹಾಯಕತೆಯ ಚಿತ್ರಣವನ್ನು ಹೇಗೆ ಚಿತ್ರಿಸಿದ್ದಾರೆ?
3. ಯುಗಾದಿ ಕತೆಯು ಆರ್ಥಿಕವಾಗಿ ಹಾಗೂ ಸಾಮಾಜಿಕವಾಗಿ ಕೆಳಸ್ತರದಲ್ಲಿರುವ ವ್ಯಕ್ತಿಗಳು ಉಳಿಸಿಕೊಂಡು ಬಂದಿರುವ ಸಾಂಪ್ರದಾಯಕ ಮೌಲ್ಯಗಳೇ ಕತೆಯ ತಿರುಳಾಗಿವೆ, ವಿವರಿಸಿ.
4. ಕನ್ನಡ ಶಾಲೆಯ ಮಾಸ್ತರಾರರಾಗಿರುವ ಗೋಪಣ್ಣ ಅವರಿಗೂ ಮತ್ತು ಅವರ ಸಾಫ್ಟವೇರ್ ಇಂಜಿನಿಯರ್ ಮಗನಿಗೂ ಉಂಟಾಗುವ ಅಂತರ ಸಂಸ್ಕೃತಿಯ ಘರ್ಷಣೆಯ ಕುರಿತು ಬರೆಯಿರಿ.
5. ಗೋಪಣ್ಣನ ಮಗ ಮನೆ ಮಾಡಿರುವ ಲೊಕಾಲಿಟಿಯಲ್ಲಿ ಯಾವ ತಂದೆ ತಾಯಿಗಳೂ ತಮ್ಮ ಮಕ್ಕಳನ್ನು ಕನ್ನಡದಲ್ಲಿ ಕಲಿಸಲು ಬಯಸುವುದಿಲ್ಲ ಏಕೆ?
6. ಏರಿಯಾದ ಮಕ್ಕಳಿಗೆ ಚೈತ್ರ, ವೈಶಾಖ, ಕಲಿಸುವುದಕ್ಕೂ ಆಕ್ಷೇಪಿಸುವ ತಂದೆತಾಯಿಗಳು ಇಂತಹ ವಿಷಯಗಳನ್ನು ಔಟ್‌ಡೇಟೆಡ್ ಆದ ವಿಷಯಗಳು ಎನ್ನುತ್ತಾರೆ ಏಕೆ?

# ಪೂರಕ ಓದು: ಮೆಗಾನೆ ಎಂಬ ಗಿರಿಜನ ಪರ್ವತ: ಹಿ.ಚಿ.ಬೋರಲಿಂಗಯ್ಯ

ಮೂಲತಃ ಬಯಲುಸೀಮೆಯ ಬೆಂಗಾಡಿನಲ್ಲಿ ಹುಟ್ಟಿದ ನನ್ನಂಥವನಿಗೆ ಮಲೆನಾಡಿಗೆ ಹೋಗುವುದೇ ಒಂದು ಆನಂದದ ಸಂಗತಿ. ಅಲ್ಲಿನ ಹಸಿರು ವನರಾಶಿಯಾಗಲೀ, ಹರಿಯುವ ಹಳ್ಳಗಳಾಗಲೀ, ಗೊಂಚಲು ಹೂವಾಗಲೀ ಬಯಲುಸೀಮೆಗೆ ಕೇವಲ ಮಳೆಗಾಲದ ಪಳೆಯುಳಿಕೆಗಳು.

ಜಾನಪದ ಅಕಾಡೆಮಿಯ ಅಧ್ಯಕ್ಷರಾದ ಶ್ರೀ ಎಸ್.ಕೆ. ಕರೀಂಖಾನ್‌ರವರು ತಮ್ಮ ಅಧಿಕಾರಾವಧಿಯ ಮೊದಲ ಹಂತವಾಗಿ ಸಹ್ಯಾದ್ರಿ ಶ್ರೇಣಿಯ ಆಜುಬಾಜಿನ ಎಲ್ಲ ಗಿರಿಜನರ ಜೀವನ ವಿಧಾನಗಳನ್ನು ಕುರಿತಂತೆ ವೀಡಿಯೋ ಸಾಕ್ಷ್ಯ ಚಿತ್ರಗಳನ್ನು ತಯಾರಿಸುವ ಒಂದು ಯೋಜನೆ ರೂಪಿಸಿದ್ದರು. ನಮ್ಮ ನಾಡಿನ ಹೆಮ್ಮೆಯ ಮಲೆನಾಡು ಕೂಡ ಸದ್ಯದಲ್ಲಿಯೇ ಬರಿದಾಗಿ, ಬಯಲಾಗಿ, ಬರಡಾಗಿ ಪರಿವರ್ತಿತವಾಗುವ ಅಪಾಯದ ಮನವರಿಕೆಯಿದ್ದ ಕರೀಂಖಾನರು ಹಸಿರು ಉಳಿದಿರುವಾಗಲೇ ನಮ್ಮ ಯೋಜನೆಯನ್ನು ಪೂರೈಸಬೇಕೆಂಬ ಕಟ್ಟಾಜ್ಞೆಯನ್ನು ಕೂಡ ನಮಗೆ ವಿಧಿಸಿದ್ದರು. ಈ ಯೋಜನೆಯ ಮೊದಲ ಹಂತವಾಗಿ ನಾವು ಶಿವಮೊಗ್ಗ ಜಿಲ್ಲೆಯ ಸಾಗರಕ್ಕೆ ಪ್ರಯಾಣ ಬೆಳೆಸಿದೆವು. ತಾಳಗುಪ್ಪದ ಗಿರಿಜನ ಆಶ್ರಮ ಶಾಲೆಯ ಹುಚ್ಚಪ್ಪ ಮಾಸ್ತರ ನೆರವಿನಿಂದ ಪಶ್ಚಿಮಕ್ಕೆ ಸುಮಾರು ೭೦ ಕಿ.ಮೀ. ಪ್ರಯಾಣ ಬೆಳೆಸಿ ನಾಗವಳ್ಳಿ ತಲುಪಿದೆವು.

ಸಹ್ಯಾದ್ರಿಯ ಅತ್ಯುನ್ನತ ಶ್ರೇಣಿಗಳ ಕಣಿವೆಯೊಳಗೆ ಸುಂದರ ನದಿ ದಡದಲ್ಲಿರುವ ನಾಗವಳ್ಳಿ ಇವತ್ತಿಗೂ ಮಲೆನಾಡಾಗೇ ಉಳಿದಿದ್ದುದು ನಮ್ಮೆಲ್ಲರಿಗೆ ಸಂತೋಷ ತಂದಿತ್ತು. ನಾಗವಳ್ಳಿ ಮತ್ತು ಹಾಡುವಳ್ಳಿಗಳ ಸುತ್ತಮುತ್ತ ದಟ್ಟ ಕಾಡಿನ ಒಡಲೊಳಗಿರುವ ಗೊಂಡ ಜನಾಂಗದವರ ಚಿತ್ರೀಕರಣ ನಮ್ಮ ಗುರಿಯಾಗಿತ್ತು. ನಾಗವಳ್ಳಿಯಿಂದ ಹಾಡುವಳ್ಳಿಗೆ ಪ್ರಯಾಣ ಬೆಳೆಸಿ ಜೀಪು ನಿಲ್ಲಿಸಿ ಸುತ್ತಲೂ ಒಮ್ಮೆ ಕಣ್ಣಾಡಿಸಿದೆವು. ಕೋಟೆಯಂತೆ ಹಬ್ಬಿದ ಪರ್ವತ ಸಾಲುಗಳು, ಮೊನಚು ಗಿರಿಶಿಖರಗಳು ಮನಸ್ಸಿನಲ್ಲಿ ಅಲೆ ಎಬ್ಬಿಸಹತ್ತಿದವು. ಅಲ್ಲಲ್ಲಿ ಸೂಜಿಯಂತೆ ಮೇಲೇಳುವ ಹೊಗೆ ವಸತಿ ಭಾಗಗಳನ್ನು ಸೂಚಿಸುತ್ತಿತ್ತು. ದೂರದೂರದಲ್ಲಿ ನಾಯಿಯೋ, ಹಸುವೋ, ಮತ್ತಾವುದೋ ಪ್ರಾಣಿಯ ಶಬ್ದ ಆಗಾಗ ತೇಲಿಬರುತ್ತಿತ್ತು. ಲಟ್... ಪಟ್.... ಎಂಬ ಮರಕಡಿಯುವ ಶಬ್ದವೂ ಕೇಳದಿರಲಿಲ್ಲ. ಹಾಡುವಳ್ಳಿಗೆ ಹಿಂದೆ ಸಂಗೀತಪುರವೆಂಬ ಹೆಸರು ಇತ್ತಂತೆ. ಅದು ಜೈನರ ಊರಾಗಿತ್ತೆಂದು ಕೇಳಿ ತಿಳಿದುಕೊಂಡೆವು. ಈಗ ೧೦-೧೨ ಮನೆಗಳ ಕುಗ್ರಾಮ ಅಷ್ಟೆ.

ಅಲ್ಲಿಂದ ಸುಮಾರು ೫ ಕಿ.ಮೀ. ದೂರದಲ್ಲಿದ್ದ ಅರ್ಕಳ ಎಂಬ ಜಾಗಕ್ಕೆ ಕಾಲ್ನಡಿಗೆಯಿಂದಲೇ ಹೊರಟೆವು. ಇಕ್ಕಟ್ಟಾದ ದಾರಿ. ದಾರಿಯಂಚಿಗೆ ಮಂಡಿಯೆತ್ತರ ಬೆಳೆದ ಹುಲ್ಲು . ಒಬ್ಬರ ಹಿಂದೆ ಒಬ್ಬರ ಪಯಣ. ಅಲ್ಲಲ್ಲಿ ಅಡಿಕೆ ತೋಟಗಳ ಗುಂಪು. ಕಣಿವೆಯಲ್ಲಿನ ತುಂಡು ಗದ್ದೆಗಳಲ್ಲಿ ಕೆಲಸ ಮಾಡುತ್ತಿದ್ದ ಗೊಂಡರು ಮತ್ತು ದೀವರ ಜನಾಂಗ. ಕೊರಳಿಗೆ ಮರದ ಗಂಟೆ ಕಟ್ಟಿಕೊಂಡ ತುಂಡು ಹಸುಗಳ ಕೊರಳ ನಾದ. ನಾಗವಳ್ಳಿಯ ದೀವರ ಕುಪ್ಪಯ್ಯ, ಗೊಂಡ ಜನಾಂಗದ ಕರಿಯ ನಮ್ಮ ಮಾರ್ಗದರ್ಶಕರು. ನಾಡಕೋವಿಯೊಂದನ್ನು ಹೆಗಲಿಗೇರಿಸಿಕೊಂಡು ಅಪ್ಪಟ ಬೇಟೆಗಾರನಂತೆ ಲೀಲಾಜಾಲವಾಗಿ ಮುನ್ನುಗ್ಗುತ್ತಿದ್ದ ಕುಪ್ಪಯ್ಯನನ್ನು ಹಿಂಬಾಲಿಸುವುದೇ ನಮಗೆ ತ್ರಾಸವಾಗುತ್ತಿತ್ತು. ತಿರುವು-ಮುರುವಿನ ಕೊರಕಲು ಹಾದಿಗಳಲ್ಲಿ ಅವನು ಮರೆಯಾಗಿ ಯಾವುದೋ ಜಾಗದಲ್ಲಿ ನಿಂತು ಇದ್ದಕ್ಕಿದ್ದಂತೆ ಪ್ರತ್ಯಕ್ಷವಾಗುತ್ತಿದ್ದ. ಕಪ್ಪು ಚರ್ಮದ ದಷ್ಟಪುಷ್ಟನಾದ ಈ ಕುಪ್ಪಯ್ಯ ಕುವೆಂಪು ಕಾದಂಬರಿಯಲ್ಲಿ ಬರುವ ನಿಷ್ಣಾತ ಬೇಟಗಾರ ಪುಟ್ಟಣ್ಣನಂತೆಯೇ ಗೋಚರವಾಗುತ್ತಿದ್ದ. ಅಲ್ಲಿನ ಪುಟ್ಟಣ್ಣನ ಸಾಹಸಗಳನ್ನು ಕಾದಂಬರಿಯಲ್ಲಿರುವಂತೆ ವರ್ಣಿಸುತ್ತಾ, ಆ ಪುಟ್ಟಣ್ಣನಿಗೂ ಈ ಕುಪ್ಪಯ್ಯನಿಗೂ ಇದ್ದಿರಬಹುದಾದ ಸಾದೃಶ್ಯ-ವೈದೃಶ್ಯಗಳನ್ನು ನಾನು ನನ್ನ ಗುಂಪಿಗೆ ವಿವರಿಸುತ್ತಿದ್ದಂತೆಯೇ ಕುಪ್ಪಯ್ಯ ಸರಕ್ಕನೆ ಹಿಂದಿರುಗಿ ಬಾಯಿ ಮೇಲೆ ಬೆರಳಿಟ್ಟು ಮಾತನಾಡದಂತೆ ಸೂಚಿಸಿದ. ಏನೋ ಇರಬೇಕೆಂದು ಅವನ ಸೂಚನೆಗನುಸಾರವಾಗಿ ನಾವೆಲ್ಲರೂ ಗಕ್ಕನೆ ನಿಂತೆವು. ಒಂದು ಕ್ಷಣ ನಿಂತು ಎತ್ತಲೋ ನೋಡಿದ ಕುಪ್ಪಯ್ಯ ಒಂದು ಸಂದಿಯಲ್ಲಿ ಓಡತೊಡಗಿದ. ನಮ್ಮ ಹಿಂದೆ ಬೆಂಗಾವಲಾಗಿ ಬರುತ್ತಿದ್ದ ಕರಿಯನೂ ಹೇಳದೆ ಕೇಳದೆ ಕುಪ್ಪಯ್ಯ ಓಡಿದ ದಾರಿಯಲ್ಲೇ ಓಡಿದ. ಐದು ನಿಮಿಷದಲ್ಲಿ ಇಬ್ಬರೂ ಏದುಸಿರು ಬಿಡುತ್ತಾ ಹಿಂತಿರುಗಿದರು. ಮೊಲವೊಂದು ಕುಪ್ಪಯ್ಯನ ಕಣ್ಣಿಗೆ ಬಿದ್ದು ಅದನ್ನು ಅಟ್ಟಿಸಿಕೊಂಡು ಹೋಗಿದ್ದಾಗಿಯೂ, ಬೇಟೆ ಸಿಗಲಿಲ್ಲವೆಂದು ಕುಪ್ಪಯ್ಯ ಅನಂತರ ವಿವರಿಸಿದ. ಹೀಗೆ ಸುಮಾರು ೫ ಕಿ. ಮೀ. ಪ್ರಯಾಣಿಸಿದ ನಾವು ಅರ್ಕಳವೆಂಬ ಸುಂದರ ತಾಣಕ್ಕೆ ಬಂದು ಸೇರಿದೆವು. ಹಾಡುವಳ್ಳಿಯಿಂದ ದೂರದಲ್ಲಿ ಗೋಚರಿಸುತ್ತಿದ್ದ ಪರ್ವತ ಶಿಖರವೊಂದು ಈಗ ನಮ್ಮ ತಲೆಯ ಮೇಲೇ ಇತ್ತು. ಆಗಾಗ ಶಿಖರಕ್ಕೆ ಮುತ್ತಿಕ್ಕುತ್ತಿದ್ದ ಮೋಡಗಳು ಕರಗಿ ಕರಗಿ ವಿವಿಧಾಕಾರ ತಾಳುತ್ತಿದ್ದವು.

ಅಂದಿನ ನಮ್ಮ ಉದ್ದೇಶ ಅರ್ಕಳದ ಗೊಂಡರ ಪರಿಸರವನ್ನು ಚಿತ್ರೀಕರಿಸಿಕೊಂಡು ಸಾಗರಕ್ಕೆ ಹಿಂತಿರುಗುವುದಾಗಿತ್ತು. ನಮ್ಮ ಹಿಂದುಗಡೆ ಮೈಚಾಚಿ ನಿಂತಿದ್ದ ಪರ್ವತ ಶ್ರೇಣಿಯೊಂದನ್ನು ತೋರಿಸಿ ಆ ಪರ್ವತದ ಮೇಲೆ "ಮೆಗಾನೆ" ಎಂಬ ಹಳ್ಳಿ ಇರುವುದಾಗಿಯೂ ಅಲ್ಲಿ 'ಕುಣಬಿ' ಎಂಬ ಜನಾಂಗ ವಾಸವಿರುವುದಾಗಿಯೂ, ಅವರಲ್ಲಿ ಅನೇಕರು ಇದುವರೆಗೆ ಸೈಕಲ್ಲನ್ನೇ ನೋಡಿಲ್ಲವೆಂದು ತಿಳಿಸಿ, ನಾವೆಲ್ಲರೂ ಸಿದ್ಧರಿರುವುದಾದರೆ ಬೆಟ್ಟ ಹತ್ತಿಸಿ ಅಲ್ಲಿಗೇ ಮೊದಲು ಕರೆದುಕೊಂಡು ಹೋಗುವುದಾಗಿಯೂ ಕುಪ್ಪಯ್ಯ ತಿಳಿಸಿದ. ಸಾವಿರಾರು ಅಡಿ ಎತ್ತರವಿದ್ದ ಬೆಟ್ಟದ ಶಿಖರವನ್ನು ನೋಡಿಯೇ ದಂಗಾಗಿದ್ದ ಮತ್ತು ಈಗಾಗಲೇ ಸಾಕಷ್ಟು ಬಸವಳಿದಿದ್ದ ವಿಷ್ಣು ಎಂಬ ಸ್ವಲ್ಪ ದಡೂತಿ ಹೊಟ್ಟೆಯ ಗೆಳೆಯ "ಅಯ್ಯಪ್ಪ ನಾನಂತೂ ಬರುವುದಿಲ್ಲ" ಎಂಬ ಪ್ರಥಮ ಉದ್ಗಾರವೆತ್ತಿದರು. "ಎಲ್ಲರೂ ಮನಸ್ಸು ಮಾಡಿದರೆ ತುಂಬಾ ಚೆನ್ನಾಗಿರುತ್ತೆ. ಹೋಗಿ ಬರೋಣ. ನಮ್ಮ ಜೀವನದಲ್ಲಿ ಇಂಥಾ ಸ್ಥಳಕ್ಕೆ ಬರ್ತೀವೋ, ಇಲ್ವೋ" ಎಂದು ಕ್ಯಾಮೆರಾಮನ್ ಶ್ರೀನಿವಾಸಮೂರ್ತಿ ಉತ್ಸಾಹ ತೋರಿ ನನ್ನ ಮುಖ ನೋಡಿದರು. ನಾನಂತೂ ಬೆಟ್ಟಹತ್ತಿಯೇ ತೀರಬೇಕೆಂಬ ದೃಢ ಮನಸ್ಸು ಮಾಡಿದ್ದೆ. ನನ್ನ ನಿರ್ಧಾರ ಪ್ರಕಟಿಸಿದ ಕೂಡಲೇ ಗೆಳೆಯ ಲಿಂಗೇಗೌಡ ಹತ್ತಲೇಬೇಕೆಂಬ ಹಟ ಹಿಡಿದರು. ಪಾಪ ವಿಷ್ಣು ಬಹುಮತಕ್ಕೆ ತಲೆಬಾಗಲೇಬೇಕಾಯಿತು. ಗೊಂಡರ ಒಬ್ಬ ಆಳನ್ನು ಹಾಡುವಳ್ಳಿಗೆ ಕಳಿಸಿ ಜೀಪು ಸಾಗರಕ್ಕೆ ಹಿಂತಿರುಗುವಂತೆ ಸೂಚಿಸಿದೆವು. ಅಧ್ಯಕ್ಷ ಕರೀಂಖಾನರು ಸಾಗರದಲ್ಲಿ ಗಿರಿಜನ ಮೇಳ ನಡೆಸುವ ಬಗೆಗೆ ಪ್ರಮುಖರ ಜೊತೆ ಸಮಾಲೋಚನೆಯಲ್ಲಿದ್ದರು. ಹುಚ್ಚಪ್ಪ ಮಾಸ್ತರೂ ಅಲ್ಲೇ ಇದ್ದರು. ಅವರಿಗೆ ಡ್ರೈವರ್ ಮೂಲಕ ಸುದ್ದಿ ಮುಟ್ಟಿಸುವಂತೆ

ಮಾಡಿ ನಾವು ನಮ್ಮ ಸಾಹಸಯಾತ್ರೆಗೆ ತೊಡಗಿದೆವು. ನಮ್ಮ ಸಾಹಸ ಯಾತ್ರೆಯ ನಂತರ ನಾಗವಳ್ಳಿಯಿಂದ ಬಸ್ಸಿನಲ್ಲಿ ಸಾಗರ ತಲುಪುವುದೆಂದು ತೀರ್ಮಾನಿಸಿಕೊಂಡೆವು. ಇಷ್ಟರಲ್ಲಿ ಸಂಜೆ ೬ ಗಂಟೆಯಾಗಿತ್ತು. ಸರಿ, ಮುಸ್ಸಂಜೆಯ ಮಸುಕು ಬೆಳಕಿನಲ್ಲಿ ನಮ್ಮ ಪ್ರಯಾಣ ಸಾಗಿತು. ಯಥಾಪ್ರಕಾರ ಕುಪ್ಪಯ್ಯ ಕೋವಿ ಹೆಗಲಿಗೇರಿಸಿ ಹೊರಟ. ಅರ್ಕಳದ ಇಬ್ಬರು ಹುಡುಗರು ನಮ್ಮ ಕ್ಯಾಮೆರಾ ಇತ್ಯಾದಿಗಳಿದ್ದ ಪೆಟ್ಟಿ ಹೊತ್ತುಕೊಂಡು ನಮ್ಮ ಜೊತೆಗೂಡಿದರು. ಕರಿಯ ಹಿಂದಿನಂತೆ ನಮ್ಮ ಬೆಂಗಾವಲಿಗೆ. ಗೊಂಡಾರಣ್ಯ, ಹಲವು ಹತ್ತು ಜಾತಿಯ ಹೆಮ್ಮರಗಳು, ನೂರೆಂಟು ರೀತಿಯ ಬಳ್ಳಿಗಳು, ಚಿಯ್‌ಯೋ.... ಎನ್ನುವ ಜೀರುಂಡೆಗಳ ಶಬ್ದ. ಆಕಾಶದಲ್ಲಿ ಕೆಂಬೆಳಕಿದ್ದರೂ ಅರಣ್ಯ ಪ್ರವೇಶಿಸುತ್ತಿದ್ದಂತೆಯೇ ಕತ್ತಲ ಅನುಭವ. ನೂರಿನ್ನೂರು ಅಡಿ ಏರುವಷ್ಟರಲ್ಲೇ ಏದುಸಿರು, ಅಸ್....ಉಸ್.... ಎನ್ನುವ ತೊಳಲಾಟ. ಒಬ್ಬರಷ್ಟೇ ಮುನ್ನಡೆಯಲು ಸಾಧ್ಯವಾಗುವಂಥ ಕಿರುದಾರಿ. ಕುಪ್ಪಯ್ಯ ಗಿಡಗಂಟೆ, ಮರಗಿಡಬಳ್ಳಿಗಳ ಲೆಕ್ಕವೇ ಇಲ್ಲದೆ ಕಾಡುಮಿಕದಂತೆ ಮುನ್ನುಗ್ಗುತ್ತಿದ್ದ. ಅವನು ನಾಲ್ಕು ಹೆಜ್ಜೆ ನಮ್ಮಿಂದ ಮುಂದಾದರೂ ಸಾಕು ಕುಪ್ಪಯ್ಯನನ್ನು ಮುಂದಿನ ದಾರಿ ತೋರಿಸುವಂತೆ ಅಂಗಲಾಚುತ್ತಿದ್ದೆವು. ಏರುತ್ತಾ ಏರುತ್ತಾ ಆವರಿಸಿದ ಕಗ್ಗತ್ತಲು ನಮ್ಮನ್ನು ಸಂಪೂರ್ಣ ಹೊಸದಾದ ಜಗತ್ತಿಗೆ ನೂಕಿತು. ಅಲ್ಲಲ್ಲಿ ಮಿಣಮಿಣಗುಟ್ಟುವ ಮಿಂಚು ಹುಳುಗಳು ಕಣ್ಣಿಗೆ ಹೊಡೆಯುತ್ತಿದ್ದವು. ಸಾವಿರ ಅಡಿ ಏರಿರಬಹುದು. ವಿಷ್ಣು ಸಾಧ್ಯವೇ ಇಲ್ಲವೆಂದು ಕುಳಿತೇಬಿಟ್ಟ, ತನ್ನನ್ನು ತಮಾಷೆ ಮಾಡಿದ ಲಿಂಗೇಗೌಡರನ್ನು ವಾಚಾಮಗೋಚರವಾಗಿ ಶಪಿಸಿದ. ವಾಸ್ತವವಾಗಿ ವಿಷ್ಣು ಮಾತ್ರ ಸುಸ್ತಾಗಿರಲಿಲ್ಲ. ವಿಷ್ಣು ಸುಸ್ತಾಗಿ ಕೂರುವುದನ್ನು ನಾವೆಲ್ಲರೂ ಕಾಯುತ್ತಿದ್ದೆವು. ಯಾವಾಗ ವಿಷ್ಣು ಕೂತನೋ ಅವನ ಮೇಲೆ ಗೂಬೆ ಕೂರಿಸಿ ನಾವೂ ಕೂತೆವು. ಹೀಗಾದರೆ ನೀವು ಮೆಗಾನೆ ತಲುಪುವುದಿಲ್ಲ ಎಂದು ಗೊಣಗುತ್ತಲೇ ಕುಪ್ಪಯ್ಯನೂ ನಿಂತ.

ಕುಪ್ಪಯ್ಯನ ಅವಸರಕ್ಕೆ ಬೇಸರದಿಂದಲೇ ಮತ್ತೆ ಪಯಣ ಮುಂದುವರೆಸಿದೆವು. ಹಿಂದೆ ಇದ್ದ ಕರಿಯ ಬಲಕ್ಕೆ ಹೋದೀರಿ, ಎಡಕ್ಕೇ ನಡೆಯಿರಿ, ಜೋಕೆ ಎಂದು ಎಚ್ಚರಿಸುತ್ತಿದ್ದ. ಬಲಕ್ಕೆ ನೂರಾರು ಅಡಿ ಆಳದ ಕಮರಿ ಇತ್ತಂತೆ. ಕತ್ತಲಾದುದರಿಂದ ಅದೇನೂ ಗೋಚರಿಸುತ್ತಿರಲಿಲ್ಲ. ಬೆಂಕಿಯ ದೊಂದಿಯನ್ನಾದರೂ ತರಬೇಕಾಗಿತ್ತೆಂದು ಕರಿಯ ಗೊಣಗಿಕೊಳ್ಳುತ್ತಿದ್ದ. ಕೈಯಲ್ಲಿದ್ದ ಟಾರ್ಚ್ ಯಾವ ಪ್ರಯೋಜನಕ್ಕೂ ಬರಲಿಲ್ಲ. ಸರಿ, ಕುಪ್ಪಯ್ಯ ಅಲ್ಲಿಯೇ ಇದ್ದ ಒಣಗಿದ ಬೆತ್ತದಂತಿದ್ದ ಕಡ್ಡಿಗಳನ್ನು ಮುರಿದು ಕಂತೆಕಟ್ಟಿ, ಬೆಂಕಿ ಹಚ್ಚಿದ. ಅದು ರವರವನೆ ಉರಿಯುವ ದೊಂದಿಯಾಯಿತು.

ಎಲ್ಲರಿಗೂ ದಾರಿ ಕಾಣುವಂತಾಯಿತು. ಅಂಥ ನಾಲ್ಕು-ಐದು ದೊಂದಿಗಳು ಉರಿದು ಭಸ್ಮವಾದರೂ ಆ ಜಾಗ ಸಿಗಲೇ ಇಲ್ಲ. ಸುಸ್ತೋ ಸುಸ್ತು. ಸುಮಾರು ಎತ್ತರವನ್ನು ಬಸವಳಿಯುತ್ತಾ ತಲುಪಿದ ಮೇಲೆ ನೀಲಾಕಾಶ ಗೋಚರಿಸಿತು. ಲಕ್ಷಾಂತರ ನಕ್ಷತ್ರಗಳು ಒಟ್ಟಿಗೇ ಮಿನುಗಿದವು. ಮೂರನೇ ಒಂದು ಭಾಗವಿದ್ದ ಚಂದ್ರನೂ ಕ್ಷೀಣವಾಗಿ ನಕ್ಕ. ಮರಗಳ ಸಂಖ್ಯೆ ವಿರಳವಾಗುತ್ತಾ ಬಂತು. ಸಣ್ಣ ಕಾಲು ಹಾದಿ ಇಷ್ಟಿಷ್ಟೇ ದೊಡ್ಡದಾಗಿ ಒಂದು ಮಾರು ಅಗಲವಾಯಿತು. ನಮ್ಮೆಲ್ಲರಿಗೆ ಜೀವ ಬಂದಂತಾಗಿ ಮಾತು ಪ್ರಾರಂಭಿಸಿದೆವು. "ಇಂಥ ಜಾಗದಲ್ಲಿ ವಾಸವಾಗಿರಲು ಇವರಿಗೇನು ಬಂದಿತ್ತು ದಾಡಿ" ಎಂದು ಲಿಂಗೇಗೌಡ ತಮ್ಮ ಗಮ್ಮತ್ತಿನಲ್ಲಿ ಬೈದು ಕುಣಬಿಯವರ ದಡ್ಡತನವನ್ನು ಆಳಿದರು. ಬೆಟ್ಟ ಹತ್ತುವಾಗ ವಿಪರೀತ ಬೆವರಿದ್ದ ಮೈನೀರು ಕ್ರಮೇಣ ಶೀತಕ್ಕೆ ತಿರುಗಿ ಚಳಿಯ ಅನುಭವವಾಗಿ ಆಶ್ಚರ್ಯವಾಯಿತು. ಅಷ್ಟು ತಂಪಾದ ಗಾಳಿ ಆ ಎತ್ತರದಲ್ಲಿ ಸುಯ್‌ಗುಡುತ್ತಿತ್ತು.

ನಮ್ಮ ಮಾತಿನ ಶಬ್ದ ಅಲೆಅಲೆಯಾಗಿ ತೇಲತೊಡಗಿದಂತೆ ಕುಣಬಿಯರ ನಾಯಿಗಳು ಚುರುಕಾಗತೊಡಗಿದುವು. ದೂರದಿಂದಲೇ ಬೊಗಳುವ ಮತ್ತು ಕುಯ್‌ಗುಡುವ ಶಬ್ದ. ಹತ್ತಿರ ಹತ್ತಿರ ಹೋಗುತ್ತಿದ್ದಂತೇ ನಾಲ್ಕಾರು ನಾಯಿಗಳು ಒಮ್ಮೆಲೇ ನುಗ್ಗಿ ಬಂದವು. ಕುಪ್ಪಯ್ಯ ಹಚಾಹಚ ಎನ್ನುತ್ತಿದ್ದರೂ ಅವನನ್ನು ಲೆಕ್ಕಕ್ಕೇ ಇಟ್ಟುಕೊಳ್ಳದೆ ಅಡ್ಡಗಟ್ಟಿ ನಿಂತವು. ಕುಣಬಿಯರಿಗೂ ಆಶ್ಚರ್ಯವಾಗಿರಬೇಕು. ಏಕೆಂದರೆ ಆ ಸರುಹೊತ್ತಿನಲ್ಲಿ ಬೆಟ್ಟ ಹತ್ತಿ ಬಂದಿರುವ ಈ ಜನ ಯಾರಿರಬಹುದು? ನಾಲ್ಕಾರು ಗಂಡಸರು ಯಾವುದೋ ಭಾಷೆಯಲ್ಲಿ ಕೂಗುತ್ತಾ ನಾಯಿಗಳ ಹಿಂದೆಯೇ ಬಂದರು. ಮಬ್ಬುಗತ್ತಲಿನ ಮುಖಗಳು ಪರಸ್ಪರ ಗುರುತು ಹಿಡಿಯಲು ತಡವಾಗುತ್ತಿದ್ದಂತೆಯೇ ಕುಪ್ಪಯ್ಯ ಜೋರಿನ ದನಿಯಲ್ಲಿ ತಾನು ಬಂದಿರುವುದಾಗಿ ಹೇಳಿಕೊಂಡ. ಅಲ್ಲಿಗೆ ಅವರ ಆತಂಕ ನಿವಾರಣೆಯಾಯಿತು. ಅವರೆಲ್ಲಾ ನಮ್ಮನ್ನು ಸುತ್ತುಗಟ್ಟಿ ಕೆಳಗಿನಿಂದ ಹೊತ್ತು ತಂದಿದ್ದವರ ತಲೆಯ ಮೇಲಿನ ಭಾರಗಳನ್ನು ಅವರೇ ಹೊತ್ತುಕೊಂಡರಲ್ಲದೆ ಬನ್ನಿ ಬನ್ನಿ ಎಂದು ಸ್ವಾಗತಿಸುತ್ತಾ ಗದ್ದೆಯ ಪುಟ್ಟ ಬದುವಿನ ಮೇಲೆ ಹೆಜ್ಜೆ ಹಾಕತೊಡಗಿದರು. ರಣರಂಗಕ್ಕೇ ಸಿದ್ಧವಾದಂತಿದ್ದ ನಾಯಿಗಳು ತಮ್ಮ ಒಡೆಯರ ನಡೆವಳಿಕೆಗನುಸಾರವಾಗಿ ತಾವು ಬಾಲ ಮುದುರಿಕೊಂಡು ಮುಸಿಮುಸಿಗುಟ್ಟುತ್ತಾ, ನೆಲ ಮೂಸುತ್ತಾ ನಡೆಯತೊಡಗಿದವು. ಮಂದ ಬೆಳಕಿನ ನಡುವೆ ಮಲಗಿದ್ದ ಗುಡಿಸಲುಗಳ ಅಂಗಳಕ್ಕೆ ಕಾಲಿಡುತ್ತಿದ್ದಂತೇ ಇಡೀ ಹಾಡಿಯ ಜನರೆಲ್ಲಾ ನಮ್ಮನ್ನು ಸುತ್ತುವರೆದರು. ಮಲಗಿ ನಿದ್ರಿಸುತ್ತಿದ್ದ ಗುಡಿಸಲೊಳಗೆ ಮಿಣಕು ದೀಪಗಳು ಹತ್ತಿಕೊಂಡವು. ಒಂದು ಗುಡಿಸಲ ಮುಂದಿನ ವಿಶಾಲ ಅಂಗಳದಲ್ಲಿ ಕಂಬಳಿ ಹಾಸಿ ನಮ್ಮನ್ನು ಕೂರಿಸಲಾಯಿತು. ಸುಸ್ತಾಗಿ ಬೆಂಡಾಗಿದ್ದ ನಮಗೆ ನೀಡಿದ ಬೆಲ್ಲದನೀರು ಅಮೃತ ಸಮಾನವಾಯಿತು. ಆಶ್ಚರ್ಯಚಕಿತ ಜನಕ್ಕೆ ನಾವು ಬಂದ ಉದ್ದೇಶವನ್ನು ವಿವರಿಸಿದ ಕುಪ್ಪಯ್ಯ 'ನಾಳೆ ಬೆಳಗ್ಗೆ ಎಲ್ಲಾ ಸೇರುವ ಹೋಗಿ' ಎಂದು ಕಳಿಸತೊಡಗಿದ. ನಮ್ಮ ವಾಸ್ತವ್ಯಕ್ಕಾಗಿ ಒಂದು ಗುಡಿಸಲ ಜಾಗವನ್ನೇ ಖಾಲಿ ಮಾಡಿಸಲಾಯಿತು. ಆತುರಾತುರವಾಗಿ ವಿಶೇಷ ಗಂಜಿ ತಯಾರಿಸಲಾಯಿತು. ಹೊಟ್ಟೆಗೇನಾದರೂ ಬಿದ್ದರೆ ಸಾಕೆಂದು ಒಣಮೋರೆ ಹಾಕಿಕೊಂಡಿದ್ದ ನಾವು ಬಟ್ಟಲುಗಟ್ಟಲೆ ಗಂಜಿ ಕುಡಿದೆವು. ವಿಷ್ಣುವಂತೂ ಉಂಡು ಎಷ್ಟು ದಿನವಾಗಿತ್ತೋ ಎನ್ನುವಂತೆ ಹೀರತೊಡಗಿದ.

ಬೆಳಿಗ್ಗೆ ಎದ್ದಾಗ ಇದು ಪರ್ವತವೇ ಅಲ್ಲ, ಯಾವುದೋ ಸಮತಟ್ಟಾದ ಸ್ಥಳದಲ್ಲಿಯೇ ಇದ್ದೇವೆ ಅನ್ನುವಂತೆ ಇಡೀ ಸ್ಥಳ ಗೋಚರವಾಯಿತು. ಆ ಪ್ರದೇಶದಿಂದ ಮತ್ತೆ ಎತ್ತರದ ಬೆಟ್ಟಗಳು ಕುಡಿಯೊಡೆದಿದ್ದವು. ಹಾಗಾದರೆ ನಾವು ಹತ್ತಿಬಂದ ಪರ್ವತ ಯಾವುದು? ಇದೇನು ಆಕಾಶಕ್ಕೆ ಏಣಿಯೇ? ಇದೇ ಸಹ್ಯಾದ್ರಿಯ ವಿಶೇಷ! ಬೆಟ್ಟದ ಮೇಲೊಂದು ಬೆಟ್ಟ, ಆ ಬೆಟ್ಟಗಳ ದುರ್ಗಮ ಕಣಿವೆ-ಕಂದರಗಳಲ್ಲೂ ಜನ ಜೀವನ. ನಮಗಂತೂ ಬಹಳ ವಿಚಿತ್ರವೆನಿಸಿತು. ಮೂಡಣ ಸೂರ್ಯ ನಮಗೆ ಕಾಣಿಸಿಕೊಳ್ಳಬೇಕಾದರೆ ಏಳುಗಂಟೆ ಮೀರಿತು. ಮತ್ಯಾವುದೋ ಬೆಟ್ಟದ ತುದಿಯೇರಿ ಸೂರ್ಯ ತನ್ನ ಕಿರಣಗಳನ್ನು ಚಾಚುತ್ತಿದ್ದ. ತೇಲಾಡುವ ಮೇಘಗಳ ಮಧ್ಯೆ ಇರುವುದರಿಂದಲೇ ಇದಕ್ಕೆ 'ಮೆಗಾನೆ' ಎಂಬ ಹೆಸರು ಬಂದಿರಲೂಬಹುದು ಎನ್ನಿಸಿತು. ಅರಳೆ ರಾಶಿಗಳಂಥ ಮೋಡಗಳ ತೇಲಾಟ ಮನಮೋಹಕವಾಗಿತ್ತು.

ಆಗಲೇ ಇಡೀ ಕುಣಬಿಯರ ಹಾಡಿ ಬದುಕಿಗಿಳಿದಿತ್ತು. ನೀರಿನ ಕೊಡ ಹಿಡಿದ ಹೆಂಗಸರು, ಕಂಬಳಿ ಗೊರಬೆ ಕವುಚಿಕೊಂಡ ಗಂಡಸರು, ನಡುವಿಗೆ ಕಟ್ಟಿದ ಪಟ್ಟಿಗೆ ಕುಡುಗೋಲು ಸಿಕ್ಕಿಸಿಕೊಂಡು ಕೆಲಸಕ್ಕೆ ಹೊರಟವರು, ಮಕ್ಕಳು, ಮರಿಗಳು. ಒಟ್ಟೊಟ್ಟಿಗೆ ಕಟ್ಟಿದ ಹತ್ತಾರು ಗುಡಿಸಲು ನೆಲದಿಂದ ಹೊರಚಿಮ್ಮಿದ ಅಣಬೆ ಮೊಗಟುಗಳಂತೆ ಕವುಚಿ ಕುಳಿತಿದ್ದುವು. ಅಚ್ಚುಕಟ್ಟಾಗಿ ಸಗಣಿಯಿಂದ ಸಾರಿಸಿದ ಅಂಗಳ, ಅಂಗಳದ ಒಂದು ಭಾಗದಲ್ಲಿ ತುಳಸೀಗಿಡ, ಅತ್ಯಂತ ಅಚ್ಚುಕಟ್ಟು ಮತ್ತು ಓರಣ. ಎತ್ತರದ ಜಾಗದಿಂದ ಸಣ್ಣ ಝರಿಯಂತೆ ಹರಿದು ಬರುತ್ತಿದ್ದ ನೀರನ್ನು ಅಡಿಕೆ ಮರದ ಓಟೆಗಳ ಮೂಲಕ ಗುಡಿಸಲಿಗೆ ತಿರುಗಿಸಿಕೊಂಡು ವಾಸ್ತವದ ನಲ್ಲಿಯನ್ನಾಗಿ ಮಾಡಿಕೊಂಡಿದ್ದರು. ತುಂಬಾ ತಂಪಾದ ನೀರು. ಪ್ರತಿಯೊಂದು ಗುಡಿಸಲೂ ನಿಸರ್ಗದ ನಡುವಿನ ಸಹಜಾಕೃತಿ.

ಗುಡಿಸಲಿಗೆ ಕಿರಿದಾದ, ಬಗ್ಗಿ ಹೋಗಬೇಕಾದ ಚಿಕ್ಕ ಬಾಗಿಲು. ಗುಡಿಸಲಿನ ಗೋಡೆಗಳಿಗೆ ವಿವಿಧಾಕೃತಿಯ ರಂಗೋಲಿ, ಚಿತ್ತಾರ. ಪ್ರತಿ ಗುಡಿಸಲ ಚಿತ್ತಾರಗಳಿಗೂ ಅವರದೇ ವಿಶೇಷತೆ ಮತ್ತು ಮೆರಗು. ಗುಡಿಸಲ ಒಳಹೋದರೆ ಕಗ್ಗತ್ತಲು, ಕಿಟಕಿಯೇ ಇಲ್ಲ. ಇದ್ದರೂ ಸಣ್ಣ ಗೂಡಿನಂಥ ರಂಧ್ರ ಜಾಗದಲ್ಲಿರುವ ಇವರಿಗೆ ಯಾವಾಗಲೂ ಚಳಿಯ ಅನುಭವವೇ ಇರಬಹುದು. ಒಳಮನೆ ತುಂಬಾ ಸರಳ. ಕೋಣೆಗೂ, ಮಲಗುವ ಜಾಗಕ್ಕೂ ಯಾವುದೇ ಅಂತರವಿಲ್ಲ. ಒಂದೇ ಹಜಾರದಲ್ಲಿ ಎಲ್ಲವೂ ನಡೆಯಬೇಕು. ಗುಡಿಸಲ ಪಕ್ಕಕ್ಕೆ ಬಚ್ಚಲ ಮನೆ. ಕಿರಿದಾದ ಬಾಯಿಯ ಗುಡಾಣಹೊಟ್ಟೆಯ ಮಣ್ಣಿನ ಹಂಡೆಗಳಲ್ಲಿ ಸದಾ ಬಿಸಿ ನೀರು. ಬೇಕಾದಷ್ಟು ಮೀಯಬಹುದು. ಮಲೆನಾಡಿನ ಜನರ ಅಭ್ಯಂಜನ ಸ್ನಾನವನ್ನು ಕೇಳಿ ತಿಳಿದಿದ್ದ ನಮಗೆ ಆ ಹಂಡೆ ನೋಡಿಯೇ ಅದರ ಅನುಭವವಾಯಿತು. ಗುಡಿಸಲ ಇನ್ನೊಂದು ಬದಿಗೆ ದನಕರುಗಳಿಗಾಗಿ ಒಂದು ಪುಟ್ಟಮನೆ. ಅದಕ್ಕೆ ತಡಿಕೆಯೇ ಬಾಗಿಲು.

ಸಾಗರ, ಭಟ್ಕಳ, ಯಲ್ಲಾಪುರ ಮುಂತಾದ ತಾಲ್ಲೂಕುಗಳಲ್ಲಿ ಅಲ್ಲಲ್ಲಿ ನೆಲೆ ಕಂಡುಕೊಂಡಿರುವ ಈ ಕುಣಬಿಗಳಿಗೆ ಸ್ವಂತ ಜಮೀನಿಲ್ಲ. ಸಾಮಾನ್ಯವಾಗಿ ಭಟ್ಟರು ಮತ್ತು ಹೆಗಡೆಯವರ ಮನೆಗಳ ಜೀತ ಮಾಡುತ್ತಾ ಅವರ ಆಶ್ರಯದಲ್ಲಿಯೇ ಬದುಕುತ್ತಾರೆ. ಕುಣಬಿಗಳ ಒಟ್ಟಾರೆ ಏಳು–ಬೀಳು, ಆರ್ಥಿಕ ಸ್ಥಿತಿ–ಗತಿ, ಉದ್ಧಾರ ಅಥವಾ ಅವನತಿ ಈ ಜಮೀನುದಾರರ

ಮೇಲೆ ಅವಲಂಬಿಸಿರುತ್ತದೆ. ಆದರೆ ಈ ಮೆಗಾನೆಯ ಕುಣಿಬಿಗಳ ವಿಶೇಷತೆಯೆಂದರೆ ಇವರಲ್ಲಿ ಅನೇಕರಿಗೆ ಸ್ವಂತ ಜಮೀನಿದೆ. ಸ್ವತಂತ್ರ ಜೀವನ ನಡೆಸುತ್ತಿದ್ದಾರೆ. ಬಹುಶ: ಈ ಪರ್ವತ ಹತ್ತಿಬಂದು ಮೆಗಾನೆಯ ಕುಣಬಿಗಳ ಮೇಲೆ ಸವಾರಿ ಮಾಡುವ ಧೈರ್ಯ ಯಾರಿಗೂ ಬರಲಿಲ್ಲವೇನೊ?

ಇಂಥ ಸ್ಥಳವನ್ನು ತಮ್ಮ ನೆಲೆಯನ್ನಾಗಿ ಆರಿಸಿಕೊಂಡ ಕುಣಬಿಗಳ ಜೊತೆ ನಮಗೆ ಹೆಚ್ಚಿನ ಕುತೂಹಲ ಉಂಟಾದದ್ದು ಸಹಜ. ಕೇಳಿದಾಗ ಹಾಡಿಯ ಯಜಮಾನ ೭೦ ವರ್ಷದ ಯಂಕು ಹೇಳಿದ ರೀತಿ ಸ್ವಾರಸ್ಯಕರವಾಗಿತ್ತು. ಈಗ ಲಿಂಗನಮಕ್ಕಿ ಅಣೆಕಟ್ಟು ಇರುವ ಪ್ರದೇಶದಲ್ಲಿ ಮೊದಲಿಗೆ ಇವರು ಜೀತದಾಳುಗಳಾಗಿಯೇ ಇದ್ದರು. ಅಣೆಕಟ್ಟು ಕಟ್ಟಲು ಆರಂಭ ಮಾಡಿದ ತರುವಾಯ ಇವರುಗಳನ್ನು ಎತ್ತಂಗಡಿ ಮಾಡಲಾಯಿತು. ಈಗಾಗಲೇ ಅಲ್ಲಿ ಮಾಲೀಕರಾಗಿದ್ದ ಮೇಲ್ವರ್ಗದವರಿಗೆ ಸರ್ಕಾರ ಯಥಾಪ್ರಕಾರ ಜಮೀನು ಮಂಜೂರು ಮಾಡಿ ಒಂದು ದಾರಿ ತೋರಿಸಿತು. ಆದರೆ ಅಲ್ಲಿ ಜೀತದಾಳುಗಳಾಗಿದ್ದ ಕುಣಬಿಯವರು, ಹಸಲರು ಮುಂತಾದವರಿಗೆ ಯಾವ ಜಮೀನು ಇಲ್ಲ, ವಸತಿಯೂ ಇಲ್ಲ. ಸರಿ, ಬಡಪಾಯಿ ಕುಣಬಿಯರ ಒಂದೆರಡು ಪಂಗಡಗಳು ಬದುಕು ಅರಸುತ್ತಾ ಅಲೆದಾಡಹತ್ತಿದವು. ಯಾವ ಒಡೆಯನ ಮನೆಗೆ ಹೋದರೂ ಒಂದು ಸೇರಕ್ಕಿ, ನಾಲ್ಕಾಣಿ ಬಿಟ್ಟರೆ ಹೆಚ್ಚಿನದೇನೂ ಇಲ್ಲ. ಗುಡ್ಡ ಹತ್ತಿ ಗುಡ್ಡ ಇಳಿದು ಸ್ವಂತ ಜಮೀನಿಗಾಗಿ ಪರದಾಡಹತ್ತಿದರು. ಎಲ್ಲಿಯೂ ಸಿಗಲಿಲ್ಲ. ಕೊನೆಗೆ ತಮ್ಮ ಕಣ್ಮುಂದೆ ಕಡಿದಾಗಿ ನಿಂತ ತನ್ನ ನೀಳ ಶರೀರವನ್ನೇ ಹಸ್ತವಾಗಿ ಚಾಚಿದ ಮೇಗಾನ ಪರ್ವತ ಇವರಿಗೆ ಆಶ್ರಯ ನೀಡಿತು.

ಯಂಕು ಮತ್ತೂ ಮುಂದುವರಿಸಿ ಹೇಳುತ್ತಾನೆ- "ನಾವೆಲ್ಲಾ ಗೋವಾದ ಕಡೆಯವರು. ನಮ್ಮ ತಾತಂದಿರ ಕಾಲದಲ್ಲಿ ಸಹ್ಯಾದ್ರಿಯ ಸಾಲನ್ನೇ ಹಿಡಿದು ವಲಸೆ ಬಂದ ನಾವು ಅಲ್ಲಲ್ಲಿ ನೆಲೆನಿಂತೆವು. ಹಾಗಾಗಿ ನಮ್ಮ ಭಾಷೆ ಮರಾಠಿಯೂ ಅಲ್ಲ, ಕೊಂಕಣಿಯೂ ಅಲ್ಲ ಅಥವಾ ಕನ್ನಡವೂ ಅಲ್ಲ. ಇದೆಲ್ಲಾ ಋಣಾನುಬಂಧ...." ಋಣಾನುಬಂಧ ಎನ್ನುವ ವಿಚಾರವನ್ನು ಮತ್ತಷ್ಟು ಕೆದಕಿದರೆ ಯಂಕು ಮತ್ತಷ್ಟು ಭಾವಜೀವಿಯಾಗಿ ಹೇಳುತ್ತಾನೆ - "ಋಣಾನು ಬಂಧವಲ್ಲದೆ ಇನ್ನೇನು ಸ್ವಾಮಿ? ಯಾವುದೋ ಗೋವಾ ನೆಲದಲ್ಲಿ ಹುಟ್ಟಿ ಕಾಡು ಕಾಡು ಅಲೆದು ಎತ್ತಂಗಡಿಯಾಗಿ ಇದೀಗ ಇಲ್ಲಿ ನಾವೆಲ್ಲಾ ಜಮೀನು ಪಡೆದು ಧನ್ಯರಾದೆವು" ಎನ್ನುತ್ತಾನೆ. ವಾಸ್ತವವಾಗಿ ಯಂಕುಗಾಗಲೀ, ಅವರ ಸಹಚರರಿಗಾಗಲೀ ಹೇಳಿಕೊಳ್ಳುವಂಥ ಜಮೀನೇನೂ ಇಲ್ಲ. ಅದು ಜೀವನಕ್ಕೆ ಸಾಕಾಗುವುದಿಲ್ಲ. ಆಗಾಗ್ಗೆ ಬೆಟ್ಟದ ಕೆಳಗಿಳಿದು ಕೂಲಿ ಮಾಡಿ ಬರುವುದೂ ಅನಿವಾರ್ಯವೇ. ಆದರೂ ಶತಶತಮಾನಗಳಿಂದ ತನ್ನದೆಂಬುದೇನೂ ಇಲ್ಲ ಎನ್ನುವ ದಾಸ್ಯದಲ್ಲೇ ಬದುಕಿದ ಇವರಿಗೆ ಕಚ್ಚಿಯಗಲದ ಸ್ವಂತ ಜಮೀನು ಕೂಡ ಸ್ವಾಭಿಮಾನವನ್ನು ಮತ್ತು ಆತ್ಮತೃಪ್ತಿಯನ್ನು ತುಂಬಿದೆಯೆಂದರೆ ಅದು ಅತಿಶಯೋಕ್ತಿಯಲ್ಲ. ಸುಮಾರು ೧೮೦ ಜನಸಂಖ್ಯೆಯಿರುವ ಈ ಮೆಗಾನೆಯ ಕುಣಬಿಯರಲ್ಲಿ ಯಾರೊಬ್ಬರಿಗೂ ಅಕ್ಷರಜ್ಞಾನವಿಲ್ಲ. ಶಾಲೆಗಳಿಗೆ ಹೋಗಬಹುದಾದ ಸುಮಾರು ೪೦ ಮಕ್ಕಳಿಗೆ ಶಾಲೆಯ ಕಲ್ಪನೆಯೂ ಇಲ್ಲ. ನಮ್ಮ ಸರ್ಕಾರ ಅಥವಾ ಅಲ್ಲಿನ ಮುಖಂಡರಿಗಾದರೂ ಮೆಗಾನೆಗೆ ಶಾಲೆಯೊಂದನ್ನು ಮಂಜೂರು ಮಾಡಬೇಕೆಂಬ ಅಥವಾ ಮೆಗಾನೆಯಲ್ಲಿ ಜನರಿದ್ದಾರೆಂಬ ಸಾಮಾನ್ಯ ಜ್ಞಾನವೂ ಇದ್ದಂತಿಲ್ಲ (ಈಗ ಅಲ್ಲಿ ಶಾಲೆ ಆರಂಭವಾಗಿದೆ). ಅದುವರೆಗೆ

ಯಾವ ಹೇಳಿಕೊಳ್ಳುವ ದೊಡ್ಡ ಮನುಷ್ಯರೂ ಆ ನೆಲವನ್ನು ನೋಡುವ ಆಸಕ್ತಿಯನ್ನಾಗಲೀ, ಕುತೂಹಲವನ್ನಾಗಲೀ ಬೆಳೆಸಿಕೊಂಡಂತೆ ಕಾಣಲಿಲ್ಲ. ಸರ್ಕಾರದ ಯಾವ ಅಧಿಕಾರಿಯಾಗಲೀ, ಸಮಾಜ ಸೇವಕರೆಂಬುವರಾಗಲೀ ಆ ಐದು ಸಾವಿರ ಅಡಿ ಬೆಟ್ಟಹತ್ತುವ ಸಾಹಸ ಮಾಡಿಲ್ಲವಂತೆ; ಆದರೂ ಸಾಗರದ ಕೆಲವು ಮುಖಂಡರ ನೆರವಿನಿಂದ ಕುಣಬಿಯರು ಹತ್ತು ಜನತಾ ಮನೆಗಳನ್ನು ಕಟ್ಟಿಕೊಂಡಿದ್ದಾರೆ. ಹೆಂಚುಗಳನ್ನು ತಲೆಯ ಮೇಲೆ ಹೊತ್ತು ಹೊತ್ತು ತಂದದ್ದೇ ಒಂದು ಸಾಹಸವೆಂದು ಹೇಳುತ್ತಾರೆ. ಆಶ್ಚರ್ಯವೆಂದರೆ ಆ ಹೆಂಚಿನ ಮನೆಗಳನ್ನು ಪ್ರತ್ಯೇಕವಾದ ಕಡೆ ಕಟ್ಟಲಾಗಿದ್ದು, ಕಾಡುಹುಲ್ಲಿನ ಗುಡಿಸಲುಗಳನ್ನು ಅವು ಅಣಕಿಸುವಂತೆ ಕಾಣುತ್ತಿದ್ದರೂ ಹುಲ್ಲಿನ ಮನೆಗಳಿಗಿರುವ ಸೌಂದರ್ಯ ಅವಕ್ಕಿಲ್ಲ ಎಂಬುದಂತೂ ಸತ್ಯ.

ಹೇಗಾದರೂ ಮಾಡಿ ಈ ಮಕ್ಕಳಿಗೆ ಅಕ್ಷರ ಕಲಿಸಲು ಪ್ರಯತ್ನಿಸಬಾರದೆ ಎಂಬ ಪ್ರಶ್ನೆಗೆ ಸುಮಾರು ೪೦ ವರ್ಷದ ದುರ್ಗ ಹೇಳುತ್ತಾನೆ "ಹೇಗೆ ಸಾಧ್ಯ ಸ್ವಾಮಿ, ಐದು ಸಾವಿರ ಅಡಿ ಇಳಿಯಬೇಕು. ಬೆಟ್ಟದ ಬುಡದಿಂದ ಹಾಡುವಳ್ಳಿಗೆ ೫ ಕಿ.ಮೀ. ನಡೆಯಬೇಕು. ಇಷ್ಟುದೂರ ಹೋಗಿ ಮಕ್ಕಳು ಹಿಂತಿರುಗುವುದಾದರೂ ಹೇಗೆ? ನಾವಂತೂ ಕಲಿಯಲಿಲ್ಲ. ನಮ್ಮ ಮಕ್ಕಳಾದರೂ ಕಲಿಯಲಿ ಎಂದರೆ ಯಾರೂ ನಮ್ಮ ಕಡೆ ಗಮನ ಕೊಡುತ್ತಿಲ್ಲ. ಇಲ್ಲಿ ಶಾಲೆ ಸ್ಥಾಪನೆ ಮಾಡಿದರೂ ಪಾಠ ಹೇಳುವ ಮಾಸ್ತರು ಬರುವುದು ಮಾತ್ರ ಅನುಮಾನ". ಇದು ಮುಗ್ಧ ದುರ್ಗನ ನಿಜವೆನ್ನಬಹುದಾದ ಅನುಮಾನ ಕೂಡ.

ಇನ್ನು ಕಾಯಿಲೆ-ಕಸಾಲೆಗಳು ಬಂದರೆ ಬೇರು, ಕಷಾಯ ಬಿಟ್ಟು ಬೇರೆ ಮಾರ್ಗವೇ ಇಲ್ಲ. ಒಂದು ವೇಳೆ ಶೀರಾ ಉಲ್ಬಣಿಸಿದರೆ ನಾಲ್ಕು ಜನ ಸೇರಿ ಬಿದಿರು ಬೊಂಬಿನ 'ಚಟ್ಟಿ' ಕಟ್ಟಿ ಅದರ ಮೇಲೆ ರೋಗಿಯನ್ನು ಮಲಗಿಸಿ ಸರ್ಕಸ್ ಮಾಡುತ್ತಾ ಬೆಟ್ಟ ಇಳಿದು ಭಟ್ಕಳದ ದಾರಿ ಹಿಡಿಯುವುದು ಇವರಿಗೆ ಅನಿವಾರ್ಯ.

ಇನ್ನು ಕುಣಬಿಯರ ವೈವಾಹಿಕ ಸಂಬಂಧಗಳಲ್ಲಿ ಅಂತ ವಿಶೇಷತೆಯೇನೂ ಇಲ್ಲ. ಆದರೆ ಅಲ್ಲಿಗೆ ಹೊರಗಿಂದ ಹೆಣ್ಣು ತರುವುದು ಕಷ್ಟ. ಹೆಣ್ಣು ಕೇಳಲು ಬರುವವರೂ ಅಪರೂಪವೇ. ಹಾಗಾಗಿ ಅಲ್ಲಲ್ಲಿಯೇ ಗಂಟುಹಾಕಿಕೊಂಡ ಸಂಬಂಧಗಳೇ ಹೆಚ್ಚು. ಬಹುಶ: ಈ ಕಾರಣಕ್ಕಾಗಿ ಕುಣಬಿಯರು ಮೊದಲಿನ ದೇಹದಾರ್ಢ್ಯ ಮತ್ತು ರೂಪವನ್ನು ಉಳಿಸಿಕೊಳ್ಳುವುದು ಕಷ್ಟವಾಗುತ್ತಿರಬಹುದಲ್ಲವೆ ಎಂಬ ನಮ್ಮ ಮಾರ್ಮಿಕ ಪ್ರಶ್ನೆಗೆ, ಆ ಪ್ರಶ್ನೆ ಯಾವ ಹಿನ್ನೆಲೆಯದು ಎಂಬುದನ್ನು ಅರ್ಥಮಾಡಿಕೊಳ್ಳಲಾಗದ ಗಣೇಶ ಎಂಬ ಕುಣಬಿ ಕಲಾವಿದ ನಕ್ಕು ಸುಮ್ಮನಾದ. ಆದರೂ ಮೆಗಾನೆಯ ಕುಣಬಿಯರಲ್ಲಿ ದಷ್ಟಪುಷ್ಟವಾದ ಹುಡುಗರಿದ್ದಾರೆ. ಪರವಾಗಿಲ್ಲ ಎಂದು ಹೇಳಬಹುದಾದ ಸಾಮಾನ್ಯ ಸುಂದರ ಹೆಣ್ಣು ಮಕ್ಕಳೂ ಇದ್ದಾರೆ. ಎಲ್ಲಕ್ಕಿಂತ ವಿಶೇಷವೆಂದರೆ ಕುಣಬಿ ಹೆಣ್ಣು ಮಕ್ಕಳ ಪ್ರೀತಿಯ ಹವ್ಯಾಸ. ಸಿಂಗರಿಸಿದ ತುರುಬಿಗೆ ಕೋಮಲವಾದ ಕಾಡು ಕುಸುಮದ ಪಕಳೆಗಳ ಮೆರಗು.

ಕುಣಿತವಿಲ್ಲದೆ ಜಾನಪದ ಬದುಕಿಲ್ಲ. ಅಂತೆಯೇ ಮೆಗಾನೆಯಲ್ಲೂ ದಿನದ ದುಡಿತದ ಆಯಾಸವನ್ನು ಮರೆಮಾಚುವಂತೆ ಮದ್ದಳೆಯ ನಾದ ಆರಂಭವಾಗುತ್ತದೆ. ಮದ್ದಳೆಯ ಪಲ್ಲವಿಗೆ ತಾಳದ ಅನುಪಲ್ಲವಿ. "ಸ್ವಾಮಿ ಶರಣು ದೇವಕೋ, ಸ್ವಾಮಿ ಶರಣು ದೇವಕೋ" ಸೊಲ್ಲಿನ ಪ್ರಾರಂಭ. ಆದರ ಜೊತೆಗೆ ರಾಮಾಯಣದ ಕಥಾನಕಗಳ ಸರಮಾಲೆ. ಈ ಹಾಡಿಗೆ ತಕ್ಕನಾಗಿ ಹರೆಯದ ಹುಡುಗರು ಬಣ್ಣದ ಸೀರೆ, ರವಿಕೆ ತೊಟ್ಟು, ತಾಳ ಮತ್ತು ಮದ್ದಳೆಯ ಲಯಕ್ಕೆ ಸೊಂಟ ಬಳುಕಿಸುತ್ತಾ, ನರ್ತಿಸುತ್ತಾರೆ. ಕುಣಬಿಯರಲ್ಲಿ ಹೆಂಗಸರು ಕುಣಿಯುವುದಿಲ್ಲವಂತೆ. ಗಂಡಸರೇ ಹೆಣ್ಣಿನ ವೇಷ ತೊಟ್ಟು ಅತ್ಯಂತ ನವಿರಾಗಿ ಕುಣಿಯುವಾಗ ಮನಸ್ಸು ಮುದಗೊಳ್ಳುತ್ತದೆ. ಸುಮಾರು ೭೦ ವರ್ಷದ ಗಣೇಶ ಈ ಹಾಡಿಯ ಪ್ರಮುಖ ಕಲಾವಿದ. ತಂದೆ-ತಾಯಿಂದ ಕಲಿತ ರಾಮಾಯಣ ಕಾವ್ಯವನ್ನು ಕೊಂಕಣಿ ಮಿಶ್ರ ಮರಾಠಿ ಭಾಷೆಯಲ್ಲಿ ೫ ರಾತ್ರಿ ೫ ಹಗಲು ಸತತವಾಗಿ ಹಾಡುತ್ತಾನಂತೆ. ಹೋಳಿ ಹುಣ್ಣಿಮೆ ಹಬ್ಬ ಬಂದರಂತೂ ಕುಣಬಿಗಳಿಗೆ ಎಲ್ಲಿಲ್ಲದ ಸಂಭ್ರಮ. ಜೊತೆಗೆ 'ಹೋಳಿ ಸಿಗ್ಮಾ' ನರ್ತನ. ಅಲ್ಲದೆ ಕೋಲುಪದ, ಗುಮಟೆ ಪದಗಳ ರಸದೌತಣ.

ಹಾಸನ ಕಡೆಯ ಬಯಲುಸೀಮೆಯಿಂದ ಆಕಸ್ಮಿಕವಾಗಿ ಮೆಗಾನೆ ಸೇರಿರುವ ಲಕ್ಷ್ಮಮ್ಮ ಅಲ್ಲಿನ ಗಣಪಿ, ಶಾಂತಿ, ಸೋಮಿ ಮುಂತಾದವರಿಗೆ ಅಚ್ಚ ಕನ್ನಡದ ಜನಪದ ಗೀತೆಗಳನ್ನು ಕಲಿಸಿರುವುದು ಒಂದು ಆಶ್ಚರ್ಯ. 'ನಮ್ಮ ಎರಡಡಕೆ ನಿಮ್ಮ ಎರಡಡಕೆ ಜೋಡು ಮಾಡಯ್ಯಾ ಶಿವನೇ....' ಎಂಬ ಹಾಡು ಪ್ರಾರಂಭವಾಗುತ್ತಿದ್ದಂತೇ ನಮ್ಮೆಲ್ಲರ ಕಿವಿ ನೆಟ್ಟಗಾದವು. ಕೊಂಕಣಿ ಮಿಶ್ರಿತ ಮರಾಠಿಯ ಅರ್ಥವಾಗದ ಹಾಡುಗಳನ್ನೇ ಹಗಲೂ–ರಾತ್ರಿ ಧ್ವನಿಮುದ್ರಿಸಿಕೊಂಡು ಸಾಕಾಗಿದ್ದ ನಮ್ಮ ಲಿಂಗೇಗೌಡರು ಈ ಹಾಡು ಕೇಳಿ ಹೊಸ ಉತ್ಸಾಹದಿಂದ ಮತ್ತೆ ಆ ಯಂತ್ರಕ್ಕೆ ಜೀವಕೊಟ್ಟರು.

ಹಗಲಿನಲ್ಲಿ ಛಾಯಾಗ್ರಹಣ, ರಾತ್ರಿಯಲ್ಲಿ ಧ್ವನಿಮುದ್ರಣ. ಕುಣಬಿಯರ ಹಾಡಿ ನಮ್ಮ ಹಾಡಿಯೇ ಅದದ್ದು ನಮ್ಮೆಲ್ಲರಿಗೆ ನೆಮ್ಮದಿ ತಂದಿತ್ತು. ಅಷ್ಟು ದೂರದ ಲೋಕದಿಂದ ಬಂದಿಳಿದ ನಾವೇ ಮಹಾಗಣ್ಯರು ಎಂಬಂತೆ ನಮ್ಮನ್ನು ನಡೆಸಿಕೊಂಡು ಕ್ಯಾಮೆರಾಕ್ಕೆ ಹೊಂದಿಕೊಂಡರು. ಅವರ ವಿಶೇಷ ಊಟವಾದ 'ಪೋಳಿ'ಯನ್ನು ಬಡಿಸಿ 'ಗುಳ್ಯಾಣಿ' ಪಾಯಸ ಕುಡಿಸಿ ಸತ್ಕರಿಸಿದರು. ಕುಣಬಿಯರು ಕೋಳಿ ತಿನ್ನುವುದಿಲ್ಲ ಎಂಬುದು ನಮಗೆ ಗೊತ್ತಿರಲಿಲ್ಲ. ಕೋಳಿ ಮಾಡಿ ಎಂದು ಅವರನ್ನು ತಮಾಷೆ ಮಾಡಿದೆವು. ಆದರೆ ತಮಾಷೆಯನ್ನೇ ಗಂಭೀರವಾಗಿ ಪರಿಗಣಿಸಿ ಬೆಟ್ಟದ ಕೆಳಗಿನ ಅರ್ಕಳಕ್ಕೆ ಒಬ್ಬನನ್ನು ಕಳಿಸಿ ಕೋಳಿ ತರಿಸಿ ಗೊಂಡರ ಕರಿಯನಿಂದ ಅಡುಗೆ ಮಾಡಿಸಿ ಬಾಳೆ ಎಲೆಯ ಮೇಲೆ ಬಡಿಸಿ ಸಂತೃಪ್ತಿಪಡಿಸಿದರು. ಕುಣಬಿಯರ ಆತಿಥ್ಯವನ್ನು ಎಂದಿಗೂ ಮರೆಯುವಂತಿಲ್ಲ.

ಆದರೆ ಈಗೀಗ ಮೆಗಾನೆಯ ಶಿಖರಕ್ಕೂ ಆಧುನಿಕತೆಯ ಗಾಳಿ ಬೀಸತೊಡಗಿದೆ. ಬೆಟ್ಟದ ಮೇಲಿರುವ ಗಂಡಸರು ಹಾಡುವಳ್ಳಿಯಲ್ಲಿ ಬಸ್ಸು ಹಿಡಿದು ಭಟ್ಕಳಕ್ಕೆ ಹೋಗಿ ಪಟ್ಟಣದಲ್ಲಿ ಅಡ್ಡಾಡಿ ಬರುವ ಸಾಹಸಮಾಡುತ್ತಿದ್ದಾರೆ. ಈ ಕಾರಣಕ್ಕಾಗಿ ಈಗಿನ ಮೆಗಾನೆಯ ಹುಡುಗಿಯರ ಬೆನ್ನು ಕುಪ್ಪಸ ಕಂಡಿದೆ. ಬಣ್ಣದ ಸೀರೆಗಳು ಸಾಮಾನ್ಯವಾಗಿವೆ. ಆದರೆ ಹಳಬರು ಮಾತ್ರ ಯಥಾಸ್ಥಿತಿಯಲ್ಲೇ ಇದ್ದಾರೆ. ಮುದುಕಿಯರು ಮೊಣಕಾಲಿನಿಂದ ಸೀರೆಯನ್ನು ಮೇಲಕ್ಕೆ ಎತ್ತಿಕಟ್ಟಿ ಅದೇ ಸೀರೆಯ ಸೆರಗನ್ನು ಎದೆಗೂ ಬಿಗಿಯುತ್ತಾರೆ. ವಯಸ್ಸಾದ ಗಂಡಸರು ಬರೀ ಲಂಗೋಟಿಯಲ್ಲೇ ಇರುತ್ತಾರೆ. ವಾಲೆ, ಕಡಕು, ಪಿಲ್ಲಿ, ತೋಳುಬಂದಿ, ಕಾಲುಕಡಗ, ಮಣಿಸರ ಹಾಕಿದ ಹೆಂಗಸರು ಅಲ್ಲಲ್ಲಿ ಕಾಣುತ್ತಾರೆ. ಗಂಡಸರು ಕಿವಿಗಳಿಗೆ ಅತ್ತಕಡಕು ಹಾಕುತ್ತಾರೆ. ಈಗಿನ ಹುಡುಗರು ಭಟ್ಕಳದ ಬನಿಯನ್ ಮತ್ತು ಖಾಕಿ ಚಡ್ಡಿ ತೊಡಲು ಮೊದಲು ಮಾಡಿದ್ದಾರೆ. ಸ್ನೋ, ಪೌಡರ್ ಮತ್ತು ಕ್ರೀಂ ಗಳನ್ನು ಇಟ್ಟುಕೊಂಡಿರುವ ಒಬ್ಬಿಬ್ಬರು ಹುಡುಗಿಯರು ಮೆಗಾನೆಯ ಹಾಡಿಯ ಹುಡುಗರ ಗುಂಪಿನಲ್ಲಿ ರೋಮಾಂಚನ ತಂದಿದ್ದಾರೆ. ಆದರೂ ನಾಗರೀಕ ಜಗತ್ತಿನ ನಿರ್ಲಕ್ಷ್ಯದಿಂದ ಈ ಎಲ್ಲರೂ ಅಕ್ಷರಜ್ಞಾನದಿಂದ ವಂಚಿತರಾಗುತ್ತಿರುವುದು ಮಾತ್ರ ವಿಷಾದನೀಯ.

ಕುಣಬಿಯರ ಆತ್ಮೀಯ ಆತಿಥ್ಯವನ್ನು ಪಡೆದು, ಅವರ ಜೀವನಕ್ರಮ ಮತ್ತು ಪರಿಸರವನ್ನು ಸೆರೆಹಿಡಿದು ಸಂತೃಪ್ತಿಯ ಮನೋಭಾವದಿಂದ ಹೊರಟಾಗ ಇಡೀ ಹಾಡಿಗೆ ಹಾಡಿಯೇ ನಮ್ಮನ್ನು ಕಳಿಸಲು ಬಂತು. ಶ್ರೀನಿವಾಸಮೂರ್ತಿ ಎಲ್ಲರನ್ನೂ ಒಂದು ಗುಡಿಸಲ ಅಂಗಳದಲ್ಲಿ ಕೂಡಿಸಿ ಅವರ ಜೊತೆ ನಮ್ಮನ್ನೂ ಸೇರಿಸಿ ಮತ್ತಷ್ಟು ಫೋಟೋ ತೆಗೆದರು. ಅವರೆಲ್ಲರಿಗೆ ಕೈಬೀಸಿ ಹೊರಟಾಗ ಹಾಲು, ಸಿದ್ದು, ಸೋಮು, ಚಿನ್ನು ಎಂಬ ಮುದ್ದು ಹುಡುಗರು ಅಟ್ಟಣೆ ಮೇಲಿಂದ ಹಕ್ಕಿ ಬೆದರಿಸುವ ಡಬ್ಬ ಬಡಿಯುತ್ತಾ, ಸೀಟಿ ಕೇಕೆ ಹಾಕುತ್ತಾ ನಮ್ಮನ್ನು ಬೀಳ್ಕೊಟ್ಟರು.

ಯಥಾಪ್ರಕಾರ ಕುಪ್ಪಯ್ಯ ನಮ್ಮ ಮುಂದೆ ಹೊರಟ. ಹಾಡಿಗಳನ್ನು ಬಿಟ್ಟು ಸ್ವಲ್ಪ ದೂರ ಹೋದ ಮೇಲೆ ಮೊನ್ನೆ ಬಂದ ದಾರಿಯಲ್ಲೇ ಇಳಿಯುವುದೋ ಅಥವಾ ಉತ್ತರ ದಿಕ್ಕಿಗೆ ಸ್ವಲ್ಪ ದೂರ ನಡೆದು ಸೀದಾ ನಾಗವಳ್ಳಿ ರಸ್ತೆಗೆ ಇಳಿಯುವುದೋ ಎಂದು ನಮ್ಮನ್ನೇ ಕೇಳಿದ. ಯಾವ ದಿಕ್ಕು ಯಾವ ಮೂಲೆ ಯಾವ ಕಾಡುಕಂದರವೂ ತೋಚದಿದ್ದ ನಮಗೆ ಕುಪ್ಪಯ್ಯನಿಗೆ ಏನು ಹೇಳುವುದು ಎಂದೇ ತಿಳಿಯಲಿಲ್ಲ. ಇಳಿಸುವುದು, ಬೀಳಿಸುವುದು ಎಲ್ಲವನ್ನೂ ಕುಪ್ಪಯ್ಯನಿಗೇ ಬಿಟ್ಟೆವು. ನಾಗವಳ್ಳಿ ದಿಕ್ಕಿಗೆ ನೇರವಾಗಿ ಇಳಿದರೆ ಸುಮಾರು ೮ ಕಿ.ಮೀ. ಪ್ರಯಾಣ ಕಡಿಮೆಯಾಗುತ್ತದೆ. ಆದರೆ ಸ್ವಲ್ಪ ಕಡಿದಾದ ದಾರಿಯಲ್ಲಿ ಕಷ್ಟಪಟ್ಟು ಇಳಿಯಬೇಕಾಗುತ್ತದೆ ಎಂದು ವಿವರಿಸಿದ ಕುಪ್ಪಯ್ಯ ನಮ್ಮ ಎದುರಿಗೇ ಇದ್ದ ಸುಮಾರು ಸಾವಿರ ಅಡಿ ಬೆಟ್ಟ ತೋರಿಸಿ ಈ ಬೆಟ್ಟ ಹತ್ತಿ ಆ ಕಡೆ ಇಳಿಯಬೇಕು ಎಂದ. ಮತ್ತೆ ಬೆಟ್ಟ ಹತ್ತುವ ಪಡಿಪಾಟಲು ಬೇಡವೇ ಬೇಡ ಎಂದು ವಿಷ್ಣು ಹಠ ಮಾಡಿದ. ಲಿಂಗೇಗೌಡ–ವಿಷ್ಣು ಬಿಸಿಬಿಸಿ ಚರ್ಚೆಯನ್ನೇ ನಡೆಸಿದರು. ಇಲ್ಲೂ ವಿಷ್ಣು ಸೋತ. ಬೆಟ್ಟ ಹತ್ತುವುದು ಮೊದಲಾಯಿತು. ತುಂಬಾ ಹುಮ್ಮಸ್ಸಿನಲ್ಲಿ ಸಾವಿರ ಅಡಿ ಏರಿದೆವು. ಇಲ್ಲಿಗೆ ಬಹುಶ: ಐದು ಸಾವಿರ ಅಡಿಗಳನ್ನು ಪೂರೈಸಿದ್ದೆವೆಂದು ಕಾಣುತ್ತದೆ. ದೂರದಲ್ಲಿ ತೆಂಗಿನ ಮರಗಳ ನಡುವೆ ಭಟ್ಕಳ ಗೋಚರಿಸಿತು. ನೀಲ ಸಾಗರ, ಮಸುಕು

ಮಸುಕಾಗಿ ಕಾಣತೊಡಗಿತು. ಭಟ್ಕಳದ ಸೇತುವೆ, ಬಂದರಿನ ಸೂಚನಾಗೋಪುರ ಎಲ್ಲವೂ ಕಾಣತೊಡಗಿದವು. ಆಳೆತ್ತರಕ್ಕೆ ಬೆಳೆದ ಹುಲ್ಲಿನ ನಡುವೆ ಕುಪ್ಪಯ್ಯ ಮತ್ತು ಕರಿಯ ನಮ್ಮ ಪೆಟ್ಟಿಗೆಗಳನ್ನು ಹೊತ್ತುಕಂಡು ದಾರಿ ಮಾಡಿಕೊಂಡು ಮುನ್ನುಗ್ಗುತ್ತಿದ್ದರು. ಇದು ಪರ್ವತವೇ ಅಲ್ಲ ಎನ್ನುವ ವಿಶಾಲ ಹುಲ್ಲುಗಾವಲು, ತೆಳುಗಾಳಿಗೆ ಇಡೀ ಹುಲ್ಲುಗಾವಲು ತೆರತೆರೆಯಂತೆ ನರ್ತಿಸುತ್ತಿತ್ತು. ಆದೊಂದು ಮನಮೋಹಕ ದೃಶ್ಯ. ಹುಲ್ಲುಗಾವಲಿನ ನಡುವೆ ಅದನ್ನು ಸೀಳಿಕೊಡು ಹೋಗುತ್ತಿದ್ದ ನಮಗೆ ಕೆಲವೊಮ್ಮೆ ಹಿಂದುಮುಂದಿನವರೇ ಕಾಣದಂತೆ ನಾವು ಯಾವುದೋ ಲೋಕದಲ್ಲಿ

ಅಂತರಪಿಶಾಚಿಗಳಾಗಿ ಅಲೆಯುತ್ತಿರುವಂತೆ ಭಾಸವಾಗಿ ಒಮ್ಮೊಮ್ಮೆ ಮೈ ನಡುಗುತ್ತಿತ್ತು. ಇದೆಂತಹ ವೈಚಿತ್ರ? ಇಷ್ಟು ವಿಸ್ತಾರವಾದ ಇಡೀ ಹುಲ್ಲುಗಾವಲಿನಲ್ಲಿ ಎಲ್ಲಿಯೂ ಒಂದು ಮರವಿಲ್ಲ. ಬರೀ ಬಯಲು ಅದೇ ಒಂದು ಲೋಕ.

ಸಹ್ಯಾದ್ರಿಯ ಶಿಖರಾರೋಹಣ ಮಾಡಿದ ಸಂತೃಪ್ತಿ ನಮಗೆ ಉಂಟಾಗಿತ್ತು. ಅಲ್ಲಿ ಕುಪ್ಪಯ್ಯ ಮತ್ತು ಕರಿಯನ ಜೊತೆ ಒಂದಿಷ್ಟು ಪೋಟೋ ತೆಗೆದೆವು. ಅರ್ಧ ಗಂಟೆ ಬೆಟ್ಟದ ತುತ್ತ ತುದಿಯಲ್ಲಿ ಕುಂತು ಇಡೀ ಮಲೆನಾಡನ್ನು ಕಣ್ಣಿಗೆ ತುಂಬಿಕೊಂಡು ಆಸ್ವಾದಿಸಿದೆವು. ಮತ್ತೆ ಕುಪ್ಪಯ್ಯನ ಅವಸರಕ್ಕೆ ಮಣಿದು ಇಳಿಯುವ ಕಾರ್ಯಕ್ಕೆ ಸಜ್ಜಾದೆವು. ಕಡಿದಾದ ಇಳಿಜಾರು. ಶರೀರದ ಭಾರ ಹಿಡಿದು ಚಮತ್ಕಾರಿಕವಾಗಿ ಇಳಿಯಬೇಕಾದ ಪರಿಸ್ಥಿತಿ. ಮತ್ತೂ ಬೃಹದಾಕಾರದ ಕಾಡು ಎದುರಾಯಿತು. ಸೂರ್ಯನ ಬಿಸಿಲನ್ನೇ ಕಾಣದ ಕಪ್ಪು ನೆಲ, ತರಗೆಲೆ ಕೊಳೆತು ಮಣ್ಣಿನೊಡನೆ ಸೇರಿಹೋದ ಕಾರಣಕ್ಕೆ ಉತ್ಪನ್ನವಾದ ಒಂದು ಥರಾ ಹಿತವಾಗಬಹುದಾದ ವಾಸನೆ. ಮರಮರವನ್ನೂ ಕೈಯಲ್ಲಿ ಹಿಡಿಯುತ್ತಾ ವಾಸರ ತಪ್ಪದಂತೆ

ಇಳಿಯತೊಡಗಿದೆವು. ಗಿಡ–ಬಳ್ಳಿ–ಮುಳ್ಳುಗಳು ಆಗಾಗ ತರಚಿ ತೊಂದರೆ ಕೊಡುತ್ತಿದ್ದವು. ಎಲ್ಲರ ಕಣ್ಣೂ ವಿಷ್ಣು ಮೇಲೆ. ಇವನೆಲ್ಲಿ ಬಂಡೆ ಉರುಳಿದ ಹಾಗೆ ಉರುಳಿ ಏಕಾಏಕಿ ನಾಗವಳ್ಳಿ ರಸ್ತೆಗೆ ಬೀಳುವನೋ ಎಂಬ ಭಯ. ಅವನಂತೂ ಉಸಿರು ಬಿಗಿಹಿಡಿದು ಅಂಗೈಯಲ್ಲಿ ಪ್ರಾಣ ಇಟ್ಟುಕೊಂಡು ನಮ್ಮನ್ನೆಲ್ಲಾ ಶಪಿಸುತ್ತಾ ಇಳಿಯುತ್ತಿದ್ದ; ಮಧ್ಯೆ ಮಧ್ಯೆ ಬುಡಮೇಲಾಗಿ ಉರುಳಿದ ಭಾರಿ ಭಾರಿ ಮರಗಳು ಅಡ್ಡಾಗುತ್ತಿದ್ದವು. ಆಕಡೆ–ಈಕಡೆ ಕಂದರಗಳು. ಅಂತಹ ಸಂದರ್ಭದಲ್ಲಿ ಮರಕ್ಕೂ, ನೆಲಕ್ಕೂ ಇರುವ ಸಂದಿನಲ್ಲಿ ನುಸುಳಿ ಹೊರಬರಬೇಕಾಗುತ್ತಿತ್ತು. ಇಂತಹ ನಾಲ್ಕೈದು ಸಾಹಸಗಳೂ ಆದವು. ಕೊನೆಗೂ ವಿಷ್ಣು ಒಂದು ಕಡೆ ಬಿದ್ದೇ ಬಿದ್ದ. ನಾಲ್ಕಡಿ ಉರುಳಿ ಒಂದು ಬೃಹತ್ ವೃಕ್ಷದ ಒಡಲಿಗೆ ತಗಲಿಕೊಂಡ. ಹೊಟ್ಟೆಯ ಮೇಲೆ ಗೀರಿದ ಒಂದು ಬೇರು ಒಂದಿಷ್ಟು ರಕ್ತದ ರುಚಿಯನ್ನೂ ನೋಡಿತು. ತಕ್ಷಣವೇ ಕುಪ್ಪಯ್ಯ ಕಾರ್ಯಪ್ರವೃತ್ತನಾಗಿ ಯಾವುದೋ ಗಿಡದ ಸೊಪ್ಪನ್ನು ಒಸಕಿ ಹಿಂಡಿ ರಕ್ತ ನಿಲ್ಲುವಂತೆ ಮಾಡಿದ. ಅಂತೂಇಂತೂ ಬೆಳಗ್ಗೆ ೧೧ ಗಂಟೆಗೆ ಮೆಗಾನೆ ಬಿಟ್ಟ ನಾವು ಸಂಜೆ ೪ ಗಂಟೆಗೆ ನಾಗವಳ್ಳಿ ತಲುಪಿದೆವು! ಹಸಿದ ಹೊಟ್ಟೆ ದಣಿದ ದೇಹ, ಬಂದವರೇ ನಾಗವಳ್ಳಿಯ ಹೊಳೆಗೆ ಧುಮುಕಿ ಮನಸಾರೆ ಈಜಾಡಿದೆವು. ನೀರು ಬಿಟ್ಟು ಮೇಲೆ ಬರಲು ಮನಸ್ಸೇ ಆಗುತ್ತಿರಲಿಲ್ಲ. ಕತ್ತಲಾಗತೊಡಗಿದಾಗ ಕುಪ್ಪಯ್ಯ ಬಂದು ನಮ್ಮೆಲ್ಲರನ್ನೂ ನೀರಿನಿಂದ ಕರೆದುಕೊಂಡು ಹೋದ. ಅವನ ಹಿಂದೆ ಒಂದು ಫರ್ಲಾಂಗ್ ನಡೆಯುವಷ್ಟರಲ್ಲಿ ಒಂದು ಗುಡಿಸಲು ಸಿಕ್ಕಿತು. ಗುಡಿಸಲಿನ ಹಜಾರದಲ್ಲಿ ಬಾಳೆ ಎಲೆ ಹಾಸಲಾಗಿತ್ತು. ಘಮಘಮ ವಾಸನೆ ಮೂಗಿಗೆ ಅಪ್ಪಳಿಸಿ ಹಸಿವನ್ನು ಮತ್ತಷ್ಟು ಪ್ರಚೋದಿಸುತ್ತಿತ್ತು. ಕುಪ್ಪಯ್ಯನ ಮನೆಯ ಮೀನಿನ ಊಟ ನಮ್ಮೆಲ್ಲರಿಗೂ ಅಮೃತ ಸಮಾನವೇನು? ಅಮೃತವೇ ಆಗಿತ್ತು!

## ಲೇಖಕರ ಪರಿಚಯ

ಹಂಪಿ ಕನ್ನಡ ವಿಶ್ವವಿದ್ಯಾಲಯದ ಕುಲಪತಿಯಾಗಿ, ಕುಲಸಚಿವರಾಗಿ, ಲಲಿತಕಲಾ ನಿಕಾಯ ಮತ್ತು ಸಮಾಜ ವಿಜ್ಞಾನ ನಿಕಾಯಗಳ ಡೀನ್ ಆಗಿ ಅಪಾರವಾದ ಆಡಳಿತಾತ್ಮಕ ಅನುಭವವಿರುವ ಡಾ. ಹಿ.ಚಿ. ಬೋರಲಿಂಗಯ್ಯ ಅವರು ಜರ್ಮನಿಯ ವೂರ್ಜ್‌ಬರ್ಗ್ ವಿಶ್ವವಿದ್ಯಾಲಯದ ಸಂದರ್ಶಕ ಪ್ರಾಧ್ಯಾಪಕರಾಗಿಯೂ ಆಹ್ವಾನಿತರಾಗಿದ್ದರು. ಇಂಜಿನಿಯರಿಂಗ್, ಮೆಡಿಕಲ್, ಕೃಷಿ, ಕಾನೂನು ಮುಂತಾದ ವೃತ್ತಿ ಶಿಕ್ಷಣ ವಿಶ್ವವಿದ್ಯಾಲಯಗಳಲ್ಲಿ ಕನ್ನಡ ಭಾಷಾ ಬೋಧನೆ ಅನುಷ್ಠಾನ ಸಮಿತಿಯ ಅಧ್ಯಕ್ಷರನ್ನಾಗಿ ಸರ್ಕಾರವು ಇವರನ್ನು ನೇಮಿಸಿತ್ತು. ಇವರು ನೀಡಿದ ವರದಿಯನ್ನು ಸರ್ಕಾರವು ಅಂಗೀಕರಿಸಿದೆ.

ಜಾನಪದ ಮತ್ತು ಸಾಹಿತ್ಯ ಕ್ಷೇತ್ರದ ಪ್ರಸಿದ್ಧ ಲೇಖಕರೂ ಆಗಿರುವ ಡಾ. ಹಿ.ಚಿ. ಬೋರಲಿಂಗಯ್ಯ ಅವರು ಉಜ್ಜನಿ ಚೌಡಮ್ಮ, ದಾಸಪ್ಪ-ಜೋಗಪ್ಪ, ಸಿದ್ದಿಯರ ಸಂಸ್ಕೃತಿ, ಕಾಡು-ಕಾಂಕ್ರಿಟ್ ಮತ್ತು ಜಾನಪದ, ಗಿರಿಜನರು, ಕರ್ನಾಟಕ ಜನಪದ ಕಲೆಗಳ ಕೋಶ, ಮಂಟೇಸ್ವಾಮಿ ಮಹಾಕಾವ್ಯ, ಗೊಂಡರ ರಾಮಾಯಣ, ಬುಡಕಟ್ಟು ದೈವಾರಾಧನೆ, ವಿಸ್ಮೃತಿ ಮತ್ತು ಸಂಸ್ಕೃತಿ, ಬುಡಕಟ್ಟು ಚಿತ್ರ ಸಂಪುಟ, ದೇಸಿ ಕನ್ನಡ ಪರಂಪರೆ, ಜನಪದ ಮಹಾಕಾವ್ಯ ಮುಂತಾದ ೨೫ಕ್ಕೂ ಹೆಚ್ಚು ಕೃತಿಗಳನ್ನು ಪ್ರಕಟಿಸಿದ್ದಾರೆ. ಇವಲ್ಲದೇ 'ಆನೆಕಾಡು' ಎಂಬ ಬುಡಕಟ್ಟು ಜೀವನವನ್ನು ಕುರಿತ ಭಿನ್ನ ನೆಲೆಯ ವಿಶಿಷ್ಟ ಕಾದಂಬರಿಯನ್ನು ರಚಿಸಿದ್ದಾರೆ. ಸುಮಾರು ೨೫ ವರ್ಷಗಳ ಹಿಂದೆ ಪ್ರಥಮ ಬಾರಿಗೆ ಮೆಗಾನೆ ಬೆಟ್ಟ ಹತ್ತಿದ ಇವರು ತಮ್ಮ ಅನುಭವವನ್ನು ರಸವತ್ತಾಗಿ ವರ್ಣಿಸಿದ್ದಾರೆ. ಅವರ 'ಗಿರಿಜನ ನಾಡಿಗೆ ಪಯಣ' ಎಂಬ ಪ್ರವಾಸ ಕಥನ ಕೃತಿಯಿಂದ ಈ ಪ್ರಬಂಧವನ್ನು ಆಯ್ದುಕೊಳ್ಳಲಾಗಿದೆ.

## ಪ್ರವಾಸ ಕಥನದ ಆಶಯ

"ಮಲೆನಾಡಿನ ಸಸ್ಯಸಂಪತ್ತು ಬಯಲುಸೀಮೆಗೆ ಒಂದು ರೀತಿಯ ಮಳೆಗಾಲದಲ್ಲಿ ದೊರೆಯುವಂತಹ ಫಳೆಯುಳಿಕೆಗಳು" ಎಂಬಂತೆ ಮಲೆನಾಡಿನ ನಿಸರ್ಗದ ಸೌಂದರ್ಯವನ್ನು ಮತ್ತು ಇದರ ಮಧ್ಯೆ ಅತ್ಯಂತ ಎತ್ತರದ ಬೆಟ್ಟದ ಮೇಲೆ ವಾಸಿಸುತ್ತಿರುವ ಕುಣಬಿ ಜನಾಂಗದವರ ಬದುಕಿನ ಯಶೋಗಾಥೆಗಳನ್ನು ಈ ಪ್ರವಾಸ ಕಥನದಲ್ಲಿ ಡಾ. ಹಿ. ಚಿ. ಬೋರಲಿಂಗಯ್ಯನವರು ಅತ್ಯಂತ ಅರ್ಥಗರ್ಭಿತವಾಗಿ ನಮ್ಮೆಲ್ಲರಿಗೆ ಇಡೀ ಕುಣಬಿ ಜನಾಂಗದ ಬದುಕನ್ನು ಪ್ರಸ್ತುತಪಡಿಸಿದ್ದಾರೆ. ಮೇಗಾನೆ ಪರ್ವತದ ಈ ಜನರ ಬದುಕು ಹಿಂದೆ ಹೇಗಿತ್ತು ಮತ್ತು ಆಧುನಿಕತೆಯ ಸ್ಪರ್ಶದಿಂದಾಗಿ ಏನೆಲ್ಲಾ ಬದಲಾವಣೆಗಳು ಆಗುತ್ತಿವೆ ಎಂಬುದನ್ನು ನಿದರ್ಶನಗಳ ಮುಖಾಂತರ ವಿವರಿಸಿದ್ದಾರೆ. ಕುಣಬಿ ಜನಾಂಗದವರ ಮನೆ ನಿರ್ಮಾಣದ ವೈಶಿಷ್ಟ್ಯಗಳು, ಅವರ ಜಾನಪದ ಶೈಲಿಯ ಮನರಂಜನೆಯ ಜೀವನಶೈಲಿ ಮತ್ತು ವೈವಾಹಿಕ ಸಂಬಂಧಗಳು ಹಾಗೂ ಅವರು ಆಚರಿಸುವ ಹಬ್ಬ ಹರಿದಿನಗಳು ಮೊದಲಾದ ವಿಷಯಗಳ ಕುರಿತು ಈ ಪ್ರವಾಸ ಕಥನದಲ್ಲಿ ಪ್ರಸ್ತುತಪಡಿಸಲಾಗಿದೆ.

## ಮಾದರಿ ಪ್ರಶ್ನೆಗಳು

1. ಈ ಪ್ರವಾಸ ಕಥನವನ್ನು ಲೇಖಕರ ಯಾವ ಪ್ರವಾಸ ಕಥನ ಕೃತಿಯಿಂದ ಆಯ್ದುಕೊಳ್ಳಲಾಗಿದೆ?
2. ನಾಗವಳ್ಳಿ ಮತ್ತು ಹಾಡುವಳ್ಳಿಗಳ ಸುತ್ತಮುತ್ತಲಿನ ದಟ್ಟಕಾಡಿನ ಒಡಲೊಳಗೆ ವಾಸವಾಗಿರುವ ಜನಾಂಗದ ಹೆಸರೇನು?
3. ಸಂಗೀತ ಪುರವು ಈ ಹಿಂದೆ ಯಾರ ಊರಾಗಿತ್ತು?
4. ಈ ಕಥೆಯಲ್ಲಿ ಬರುವ ಕರಿಯ ಯಾರು ಅವನ ಬಗ್ಗೆ ಬರೆಯಿರಿ.
5. "ಮಲೆನಾಡಿನ ಸಸ್ಯಸಂಪತ್ತಿನ ಅನುಭವವು ಬಯಲುಸೀಮೆಯ ಜನರಿಗೆ ಒಂದು ರೀತಿಯ ಮಳೆಗಾಲದಲ್ಲಿ ದೊರೆಯುವ ಪಳೆಯುಳಿಕೆಗಳು ಇದ್ದಂತೆ" ಈ ಮಾತನ್ನು ಲೇಖಕರು ಯಾವ ಅರ್ಥದಲ್ಲಿ ವಿಶ್ಲೇಷಿಸಿದ್ದಾರೆ? ಚರ್ಚಿಸಿರಿ.
6. ಮೇಗಾನೆ ಎಂಬ ಈ ಗ್ರಾಮಕ್ಕೆ " ಮೇಘಾನೆ" ಎಂಬ ಹೆಸರು ಬರಲು ಕಾರಣವೇನು?
7. ಮೇಘಾನೆ ಗ್ರಾಮದಲ್ಲಿ ವಾಸವಿರುವ ಬುಡಕಟ್ಟು ಜನಾಂಗದ ಹೆಸರೇನು?
8. ಕುಣಬಿ ಜನಾಂಗದವರ ಮನೆ ನಿರ್ಮಾಣದ ವೈಶಿಷ್ಟ್ಯತೆಗಳ ಬಗ್ಗೆ ಬರೆಯಿರಿ.
9. ಕುಣಬಿ ಜನಾಂಗದವರು ವಾಸಿಸುತ್ತಿರುವ ರಾಜ್ಯದ ಇತರ ಪ್ರದೇಶಗಳ ಸ್ಥಳಗಳನ್ನು ತಿಳಿಸಿರಿ.
10. ಮೇಘಾನೆ ಪರ್ವತ ಪ್ರದೇಶದಲ್ಲಿ ವಾಸಿಸುತ್ತಿರುವ ಕುಣಬಿ ಜನಾಂಗಕ್ಕೂ ಮತ್ತು ಇತರೆ ಪ್ರದೇಶಗಳ ಕುಣಬಿ ಜನಾಂಗಕ್ಕೂ ಇರುವ ವ್ಯತ್ಯಾಸವೇನು?
11. ಈಗಿನ ಲಿಂಗನಮಕ್ಕಿ ಪ್ರದೇಶದಲ್ಲಿ ವಾಸವಿದ್ದ ಈ ಜನರು ತದನಂತರ ಮೇಘಾನೆ ಪರ್ವತದಲ್ಲಿ ಬಂದು ನೆಲೆಕಂಡುಕೊಳ್ಳಲು ಕಾರಣವೇನು?
12. ಕುಣಬಿ ಜನಾಂಗದವರು ಮೂಲತ: ಯಾವ ರಾಜ್ಯದ ಹಿನ್ನೆಲೆಯನ್ನು ಹೊಂದಿದ್ದಾರೆ?
13. ಕುಣಬಿಗಳ ವೈವಾಹಿಕ ಸಂಬಂಧಗಳ ಬಗ್ಗೆ ಬರೆಯಿರಿ.
14. ಜಾನಪದ ಸಾಹಿತ್ಯದಲ್ಲಿ ಕುಣಬಿಗಳ ವಿಶಿಷ್ಟತೆಯ ಕುರಿತು ವಿಶ್ಲೇಷಿಸಿರಿ.